1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.94/2023

PW- 08

CW- 04

ಪ್ರ. ಬೋ. ದಿನಾಂಕಃ 09-01-2024

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಆರಿಫಾ ಶರಿಫಾ |
| ತಂದೆ/ಗಂಡನ ಹೆಸರು | : | ಮೆಹಬೂಬ್ ಶರಿಫ್ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ | : | ತುಮಕೂರು. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ನನ್ನ ತಂದೆ ತಾಯಿಗೆ ಒಟ್ಟು ಐದು ಜನ ಮಕ್ಕಳು. ಮೃತ ಫಾರುಕ್ ಉಲ್ಲಾ ನನ್ನ ತಮ್ಮ. 1 ನೇ ಆರೋಪಿ ನನಗೆ ಗೊತ್ತು. ಚಾಸಾ-1 ನನ್ನ ತಮ್ಮನ ಹೆಂಡತಿ. ಚಾಸಾ-9 ಮತ್ತು 10 ನನಗೆ ಗೊತ್ತು. ಚಾಸಾ-5 ನನ್ನ ತಂಗಿ. ನನ್ನ ತಮ್ಮ ಮೃತ ಫಾರುಕ್ ಉಲ್ಲಾ ಹಣ್ಣಿನ ವ್ಯಾಪಾರ ಮಾಡುತ್ತಿದ್ದ. ನನ್ನ ತಮ್ಮ ಕೊಲೆಯಾಗಿದ್ದರಿಂದ ಮೃತಪಟ್ಟಿರುತ್ತಾನೆ.

ದಿ.17-03-2023 ರಂದು ಮನ್ಸೂರ್ ಮತ್ತು ನಸ್ರೂಲ್ಲಾ ರವರು ಚಾಕು ಹಾಕಿ ನನ್ನ ತಮ್ಮನನ್ನು ಕೊಲೆ ಮಾಡಿದ್ದಾರೆ ಎಂದು ವಿಷಯ ತಿಳಿಯಿತು. ವಿಷಯ ತಿಳಿದು ದಾವಣಗೆರೆಯ ಚಿಗಟೇರಿ ಆಸ್ಪತ್ರೆಯಲ್ಲಿ ಫಾರುಕ್ ಉಲ್ಲಾನ ಮೃತ ದೇಹವನ್ನು ನೋಡಿದ್ದೇನೆ. ಕುತ್ತಿಗೆ ಎಡ ಭಾಗಕ್ಕೆ ಬೆನ್ನಿನ ಬಲ ಭುಜದ ಹಿಂಭಾಗಕ್ಕೆ ಚಾಕುವಿನಿಂದ ಇರಿದ ಗಾಯಗಳಾಗಿದ್ದವು. ಮನ್ಸೂರ್ ನ ಬರ್ತಡೇ ಪಾರ್ಟಿಗೆ ಊರಿನ 10 ರಿಂದ 12 ಜನ ಹುಡುಗರು ಹೋಗಿದ್ದರು , ಆ ಸ್ಥಳದಲ್ಲಿ ಕೇಕ್ ಕಟ್ ಮಾಡಿ, ಚಿಕನ್ ಬಿರಿಯಾನಿ ತಿನ್ನುತ್ತ ಖಲಂದರ್ ನ ಫೋನ್ ನ್ನು 1 ನೇ ಆರೋಪಿ ಹಾಡು ಕೇಳಲು ಪಡೆದಿದ್ದು, ಪಾರ್ಟಿ ಮುಗಿದ ಮೇಲೆ ಖಲಂದರ್ ಮೊಬೈಲ್ ವಾಪಸ್ ಕೇಳಿದಾಗ ಅವನು ಸತಾಯಿಸಿ ಕೊಡಲಿಲ್ಲ , ಮನೆಯಲ್ಲಿ ಬೈಯುತ್ತಾರೆ ಎಂದಾಗ ನಾಳೆ ಕೊಡುತ್ತೇನೆ ಎಂದಾಗ ಆತ ಮನೆಗೆ ಬಂದು ತನ್ನ ತಂದೆಗೆ ವಿಷಯ ತಿಳಿಸಿದ್ದು, ಆತನ ತಂದೆ 1 ನೇ ಆರೋಪಿಗೆ ಫೋನ್ ಮಾಡಿ , ಯಾಕಪ್ಪಾ ಫೋನ್ ಕೊಟ್ಟಿಲ್ಲ ಎಂದು ಕೇಳಿದ್ದಕ್ಕೆ 1 ನೇ ಆರೋಪಿ ಆತನಿಗೆ ಕೆಟ್ಟ ಕೆಟ್ಟ ಮತಿನಿಂದ ಬೈದು ,

ಬೇಕಿದ್ದರೆ , ದಮ್ಮ ಇದ್ದರೆ ಬಂದು ತೆಗೆದುಕೊಂಡು ಹೋಗಿ ಎಂದು ಹೇಳಿದ್ದರಿಂದ ಫೋನ್ ತೆಗೆದುಕೊಂಡು ಬರಲು ತಂದೆ-ಮಗ ಹೋಗುತ್ತಿದ್ದಾಗ ಬಿಎಸ್ ಎನ್ ಎಲ್ ಕಛೇರಿ ಬಳಿ ಹಬೀದ ಉಲ್ಲಾ ಮತ್ತು ಫಾರುಕ್ ಉಲ್ಲಾ ಕುಳಿತಿದ್ದಾಗ ಅವರಿಗೆ ವಿಷಯ ತಿಳಿಸಿ, ಫೋನ್ ಕೊಟ್ಟಿಲ್ಲ , ಸಾಯಿಸಿ ಕಳುಹಿಸಿದ್ದಾರೆ , ಕೇಳಿದರೆ ಕೆಟ್ಟ ಕೆಟ್ಟ ಮಾತನಾಡಿದ್ದಾರೆ ,ನೀವು ವಿಚಾರಿಸಿ ನನ್ನ ಮಗನ ಮೋಬೈಲ್ ಫೋನ್ ತೆಗೆದುಕೊಂಡು ಬನ್ನಿ ಖಲಂದರ್ ಎಂದು ಅವರಿಗೆ ಕೇಳಿದ್ದು , ಆಗ ನನ್ನ ತಮ್ಮ , ಹಬಿದುಲ್ಲಾ ರವರು ಖಲಂದರ್ ದಾರಿ ತೋರಿಸಿದಂತೆ ಹೋಗಿ , ಸ್ಥಳದಲ್ಲಿ ಮನ್ಸೂರ್ ಮತ್ತು ನಸರುಲ್ಲಾ ಇದ್ದರು , ಆಗ ಹಬಿದುಲ್ಲಾ ಫೋನ್ ಕೇಳಿದಾಗ ಆರೋಪಿತರು ಕೆಟ್ಟ ಕೆಟ್ಟ ಮಾತುಗಳಿಂದ ಬೈದಿದ್ದು , ಆಗ ನನ್ನ ತಮ್ಮ ಯಾಕೆ ಬೈಯುತ್ತೀರಾ ಎಂದು ಕೇಳಿದ್ದಕ್ಕೆ 1 ನೇ ಆರೋಪಿ ಏಕಾ ಏಕಿ ಬಂದು ನನ್ನ ತಮ್ಮನ ಎಡ ಕುತ್ತಿಗೆ ಭಾಗಕ್ಕೆ ಚಾಕು ಹಾಕಿದ್ದು ಬಿಡಿಸಲು ಹೋದ ಹಬಿದುಲ್ಲಾನಿಗೆ ಮನ್ಸೂರ್ ಮುಷ್ಟಿಯಿಂದ ಮುಖಕ್ಕೆ ಮತ್ತು ಎದೆಗೆ ಹೊಡೆದಿದ್ದು , ಮನಸೂರ್ ಹಿಂದಿಂದ ಬಂದು ಫಾರುಕ್ ನ ಬೆನ್ನಿಗೆ ಚಾಕು ಹಾಕಿದ್ದರಿಂದ ನನ್ನ ತಮ್ಮ ರಕ್ತಸ್ರಾವವಾಗಿ ಅಲ್ಲೇ ಸ್ಥಳದಲ್ಲಿ ಮೃತಪಟ್ಟ , ಆ ನಂತರ ಆರೋಪಿತರು ಅಲ್ಲಿಂದ ಓಡಿ ಹೋಗಿದ್ದಾರೆ ಎಂದು ತಿಳಿಸಿದರು.

ಪೊಲೀಸರು ಆಸ್ಪತ್ರೆಯಲ್ಲಿ ಶವದ ಮೇಲೆ ಪಂಚನಾಮೆ ಮಾಡಿ, ಫೋಟೋ ತೆಗೆಸಿದ್ದಾರೆ.

ಸಾಕ್ಷಿ ನಿಪಿ.2 ರಿಂದ 7 ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ನನ್ನ ತಮ್ಮನ ಸಾವಿಗೆ ಆರೋಪಿತರೇ ಕಾರಣರಾಗಿರುತ್ತಾರೆ.

ಪಾಟೀಸವಾಲು:- ಆರೋಪಿ ಪರ ಶ್ರೀ ಕೆ ಎನ್ ಆರ್ ವಕೀಲರಿಂದ.

ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ಪಾಟೀಸವಾಲಿಗಾಗಿ ಮುಂದೂಡಲಾಯಿತು.

ಮರು ವಿಚಾರಣೆ:- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

ಇಂದು ದಿ.25-01-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣಿಕರಿಸಲಾಯಿತು.

ಪಾಟೀಸವಾಲುಃ- ಆರೋಪಿ ಪರ ಶ್ರೀ ಕೆ ಎನ್ ಆರ್ ವಕೀಲರಿಂದ.

ನನ್ನ ಗಂಡನ ಊರು ತುಮಕುರು. ಸಾಕ್ಷಿಗೆ ಈ ವಿಷಯ ನಿಮಗೆ ಎಷ್ಟು ಗಂಟೆಗೆ ತಿಳಿಯಿತು ಎಂದರೆ ಸಾಕ್ಷಿ - ರಾತ್ರಿ 1-00 ರಿಂದ 1-30 ಗಂಟೆ ಒಳಗೆ ತಿಳಿದಿರುತ್ತದೆ ಎಂದು ನುಡಿದಿರುತ್ತಾರೆ. ನಿಮಗೆ ಯಾರಿಂದ ವಿಷಯ ತಿಳಿಯಿತು ಎಂದರೆ ಸಾಕ್ಷಿ - ನನ್ನ ಭಾವ ಶಾಬುದ್ದಿನ್ ರವರಿಂದ ವಿಷಯ ತಿಳಿಯಿತು , ಆಗ ನಾನು ಅವರ ಮನೆಯಲ್ಲಿಯೇ ಇದ್ದೆ ಎಂದು ನುಡಿದಿರುತ್ತಾರೆ. ಏನು ವಿಷಯ ತಿಳಿಸಿದರು ಎಂದು ಪ್ರಶ್ನಿಸಲಾಗಿ - ಏನೋ ಗಲಾಟೆಯಾಗಿ ಹೊಡೆತ ಬಿದ್ದಿದೆಯಂತೆ ಊರಿಗೆ ಹೋಗೋಣ ಎಂದು ತಿಳಿಸಿದರು ಎಂದು ನುಡಿದಿರುತ್ತಾರೆ. ನಾನು ಎಲ್ಲಿ ಬಿತ್ತು , ಏನು ಬಿತ್ತು ಎಂದರೆ ಅವರು ಏನೂ ಗಾಭರಿಯಾಗುವುದು ಬೇಡ ಊರುಗೆ ಹೋಗೋಣ ಎಂದು ತಿಳಿಸಿದರು ಎಂದು ಸಾಕ್ಷಿ ಮುಂದುವರೆದು ನುಡಿದಿರುತ್ತಾರೆ. ಚಾಕುವಿನಿಂದ ಚುಚ್ಚಿ ಕೊಲೆ ಮಾಡಿದ್ದಾರೆ ಎಂದು ಪೂರ್ತಿ ವಿಷಯ ನಿಮಗೆ ಗೊತ್ತಾದಾಗ ಸಮಯ ಎಷ್ಟು ಗಂಟೆಯಾಗಿತ್ತು ಎಂದರೆ ಸಾಕ್ಷಿ ಬೆಳಗಿನ ಜಾವ 3-00 ಗಂಟೆಯಾಗಿತ್ತು ಎಂದು ನುಡಿದಿರುತ್ತಾರೆ. ನೀವು ನೇರವಾಗಿ ಪೊಲೀಸ್ ಠಾಣೆಗೆ ಹೋಗಿದ್ದೀರಾ ಎಂದರೆ ಸಾಕ್ಷಿ ದಾರಿಯಲ್ಲಿಯೇ ಪೊಲೀಸ್ ಠಾಣೆ ಇದೆ , ನನ್ನ ಸಂಬಂಧಿಕರೆಲ್ಲ ನಿಂತಿದ್ದರು , ನಾನು ಕಾರಿನ ಚಾಲಕನಿಗೆ ನಿಲ್ಲಿಸಪ್ಪ ಎಂದು ಹೇಳಿದ್ದೇವೆ ಎಂದು ನುಡಿದಿರುತ್ತಾರೆ. ಫಾರುಕ್ ನ ಕೊಲೆಯಾಗಿದೆ ಎಂದು ನನ್ನ ಮಾವ, ನನ್ನ ಚಿಕ್ಕಮಾವ ಹೇಳಿದ್ದಾರೆ ಎಂದು ಸಾಕ್ಷಿ ನುಡಿದಿದ್ದಾರೆ. ಚಾಕುವಿನಿಂದ ಚುಚ್ಚಿ ಕೊಲೆ ಮಾಡಿದ್ದಾರೆ ಎಂದು ನಿಮಗೆ ಗೊತ್ತಾಯಿತು ಎಂದು ಹೇಳಿದ್ದೀರಾ , ಯಾರು ಚುಚ್ಚಿ ಕೊಲೆ ಮಾಡಿದ್ದಾರೆ ಎಂದು ಗೊತ್ತಾಗಿದೆ ಎಂದರೆ ಸಾಕ್ಷಿ - ಮನ್ಸೂರ್ ಮತ್ತು ನಸ್ರೂಲ್ಲಾ ಚುಚ್ಚಿ ಕೊಲೆ ಮಾಡಿದ್ದಾರೆ ಎಂದು ಗೊತ್ತಾಯಿತು ಎಂದು ನುಡಿದಿರುತ್ತಾರೆ. ನೀವು ಆ ಸಮಯದಲ್ಲಿ ದೂರು ನೀಡಲು ಪ್ರಯತ್ನ ಪಟ್ಟಿರಾ ಎಂದರೆ ಸಾಕ್ಷಿ - ನೀವು ಹೆಣ್ಣುಮಕ್ಕಳಿದ್ದೀರಾ , ನೀವು ಮನೆಗೆ ಹೋಗಿ ಎಂದು ಕಳುಹಿಸಿದರು , ಆದ್ದರಿಂದ ದೂರು ನೀಡಿಲ್ಲ ಎಂದು ನುಡಿದಿದ್ದಾರೆ. ಸಾಕ್ಷಿಗೆ ನಿಮ್ಮ ಸಂಬಂಧಿಕರು ನಾವು ದೂರು ಕೊಡುತ್ತೇವೆ ಎಂದು ಹೇಳಿದರಾ ಎಂದು ಪ್ರಶ್ನಿಸಲಾಗಿ , ತಕ್ಷಣ ನಮ್ಮನ್ನು ಅಲ್ಲಿಂದ ಕಳುಹಿಸಿದ್ದಾರೆ , ಆ ರೀತಿ ಹೇಳಿಲ್ಲ ಎಂದು ನುಡಿದಿದ್ದಾರೆ.

ಕುತ್ತಿಗೆಯ ಎಡ ಭಾಗಕ್ಕೆ , ಬೆನ್ನಿನ ಬಲ ಭುಜದ ಹಿಂಭಾಗಕ್ಕೆ ಚಾಕುವಿನಿಂದ ಇರಿದ ಗಾಯಗಳಾಗಿದ್ದವು ಎಂದು ನೀವು ಪೊಲೀಸರ ಮುಂದೆ ಹೇಳಿದ್ದೀರಾ ಎಂದರೆ ಸಾಕ್ಷಿ ಮೊದಲು ಹೇಳಿಕೆಯನ್ನು ಕೊಟ್ಟಿಲ್ಲ ಎಂದು ನುಡಿದು , ಮತ್ತೊಮ್ಮೆ ಕೇಳಿದಾಗ ಆಸ್ಪತ್ರೆಯಲ್ಲಿ ಹೇಳಿದ್ದೇನೆ ಎಂದು ನುಡಿದಿದ್ದಾರೆ.

ಆಗ ನನ್ನ ತಮ್ಮ, ಹಬಿದುಲ್ಲಾ ರವರು ಖಲಂದರ್ ದಾರಿ ತೋರಿಸಿದಂತೆ ಹೋಗಿ , ಸ್ಥಳದ್ಲಿ ಮನ್ಸೂರ್ ಮತ್ತು ನಸ್ರೂಲ್ಲಾ ಇದ್ದರು ಎಂದು ಪೊಲೀಸರಿಗೆ ಹೇಳಿದ್ದೀರಾ ಎಂದರೆ ಸಾಕ್ಷಿ - ಆಸ್ಪತ್ರೆಯಲ್ಲಿ ಹೇಳಿದೇನೆ ಎಂದು ನುಡಿದಿರುತ್ತಾರೆ. ನಾನು ಮೇಲೆ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ , ಆದರೆ ಹೇಳಿಕೆ ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಸ್ರೂಲ್ಲಾ ಈತನು ಯಾವುದೋ ಆಯುಧದಿಂದ ಫಾರುಕ್ ಉಲ್ಲಾನ ಎಡ ಕುತ್ತಿಗೆಯ ಕೆಳ ಭಾಗಕ್ಕೆ, ಬಲವಾಗಿ ಚುಚ್ಚಿ ಇರಿದ ಪರಿಣಾಮವಾಗಿ ತೀವ್ರ ರಕ್ತಗಾಯದಿಂದ ರಕ್ತಸ್ರಾವವಾಗಿ ಫಾರುಕ್ ಉಲ್ಲಾ ನು ಸ್ಥಳದಲ್ಲಿ ಮೃತಪಟ್ಟಿರುತ್ತಾನೆ ಎಂದು ಪೊಲೀಸರ ಮುಂದೆ ಹೇಳಿದ್ದೀರಾ ಎಂದರೆ ಸಾಕ್ಷಿ ಹೇಳಿಲ್ಲ ಎಂದು ನುಡಿದಿರುತ್ತಾರೆ. ಸದರಿ ಹೇಳಿಕೆಯ ಭಾಗವನ್ನು ನಿಡಿ.1 ಎಂದು ಗುರುತಿಸಲಾಯಿತು.

ಮೋಬೈಲ್ ನಂ.9900102786 ಮೋಬೈಲ್ ನಂಬರ್ ಫಾರುಕ್ ಉಲ್ಲಾನದು ಎಂದರೆ ಸಾಕ್ಷಿ - ನನಗೆ ನೆನಪಿರುವುದಿಲ್ಲ ಆದರೆ ನನ್ನ ತಮ್ಮನ ಮೋಬೈಲ್ ನ ಕೊನೆಯ ನಂಬರ್ 786 ಆಗಿರುತ್ತದೆ ಎಂದು ನುಡಿದಿರುತ್ತಾರೆ. 8073022172 ಮೋಬೈಲ್ ನಂಬರ್ ನಿಮ್ಮ ಮೋಬೈಲ್ ನಂಬರ್ ಎಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ.

ದಿ.16-03-2023 ರಂದು ರಾತ್ರಿ 08.30.31 ಗಂಟೆಗೆ ನಿಮ್ಮ ತಮ್ಮ ಫಾರುಕ್ ಉಲ್ಲಾನಿಗೆ ನೀವು ಕರೆ ಮಾಡಿದ್ದೀರಾ, ಏನು ಮಾತನಾಡಿದ್ದೀರಾ ಎಂದು ಪ್ರಶ್ನಿಸಲಾಗಿ ಸಾಕ್ಷಿ - ಮನೆಗೆ ಬಾರಮ್ಮ ಇನ್ನು ಸ್ವಲ್ಪ ದಿನ ಇದ್ದು ಹೋಗು , ಯಾಕೆ ಅರ್ಜೆಂಟ್ ಮಾಡುತ್ತೀಯಾ ಎಂದು ನನ್ನ ತಮ್ಮ ಹೇಳಿದ್ದ ಎಂದು ನುಡಿದಿರುತ್ತಾರೆ. ಆಗ ನಿಮ್ಮ ತಮ್ಮ ಎಲ್ಲಿದ್ದ ಎಂದರೆ ಸಾಕ್ಷಿ - ಅದನ್ನು ನಾನು ಕೇಳಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ಯಾರು ಯಾರಿಗೆ ಕರೆ ಮಾಡಲಾಗಿದೆ ಎಂದು ಹೇಳಲು ನೆನಪಿರುವುದಿಲ್ಲ

ಎಂದು ನುಡಿದಿರುತ್ತಾರೆ. ಆ ದಿನ ನಿಮ್ಮ ತಮ್ಮನಿಂದ ನಿಮಗೆ ಕೊನೆಯಕಾಲ್ ಎಷ್ಟು ಗಂಟೆಗೆ ಬಂದಿತ್ತು ಎಂದರೆ ಸಾಕ್ಷಿ 9-56 ನಿಮಿಷದಲ್ಲಿ ಬಂದಿರಬಹುದು ಎಂದು ನುಡಿದಿರುತ್ತಾರೆ. ಆಗ ಏನು ಮಾತನಾಡಿದ್ದೀರಾ ಎಂದರೆ ಸಾಕ್ಷಿ - ಎಷ್ಟು ಗಂಟೆಗೆ ಟ್ರೈನ್ ಎಂದು ಕೇಳಿದ್ದಾನೆ, ಹಾಗಾದರೆ ಊರಿಗೆ ಹೋಗಿ ಫೋನ್ ಮಾಡು ಎಂದು ಹೇಳಿದ್ದಾನೆ ಎಂದು ನುಡಿದಿದ್ದಾರೆ. 2 ನೇ ಬಾರಿಗೆ ಕರೆ ಮಾಡಿದಾಗ ಆತ ಎಲ್ಲಿದ್ದ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿದಿದ್ದಾರೆ. ಸಾಕ್ಷಿಗೆ ಆ ರೀತಿ ಎರಡು ಬಾರಿ ಕರೆ ಮಾಡಿದಾಗ ನಿಮ್ಮ ತಮ್ಮ ನನಗೆ ಪ್ರಾಣ ಭೀತಿ ಇದೆ ಎಂದು ಹೇಳಿದ್ದಾನೆ ಎಂದರೆ ಸಾಕ್ಷಿ ಆ ರೀತಿ ಹೇಳಿಲ್ಲ ಎಂದು ನುಡಿದಿದ್ದಾರೆ. ನೀವು ಆಗ ಹೊಯ್ಸಳಾಗೆ ಕರೆ ಮಾಡಿ ಹೇಳು , ನಿನಗೆ ಪ್ರಾಣ ರಕ್ಷಣೆ ಸಿಗುತ್ತದೆ ಎಂದು ನಿಮ್ಮ ತಮ್ಮನಿಗೆ ಹೇಳಿದ್ದೀರಾ ಎಂದರೆ ಸಾಕ್ಷಿ ಆ ರೀತಿ ಹೇಳಿಲ್ಲ ಎಂದು ನುಡಿದಿರುತ್ತಾರೆ. ಸಾಕಿಗೆ - ದಿ.16-03-2023 ರಂದು ಎರಡು ಬಾರಿ ಕರೆ ಮಾಡಿದಾಗಲೂ ಸಹ ನಿಮ್ಮ ತಮ್ಮ ನನಗೆ ಹಬಿದ್ ನ ಕಡೆಯಿಂದ ಪ್ರಾಣ ಭೀತಿ ಇದೆ , ಮುಜಿಬುಲ್ಲಾ ಖಾನ್ ಮತ್ತು ಖಲಂದರ್ ಅವರಿಗೆ ಸಹಾಯ ಮಾಡುತ್ತಿದ್ದಾರೆ ಎಂದು ತಿಳಿಸಿದ್ದಾನೆ ಎಂದರೆ ಸಾಕ್ಷಿ ಆ ರೀತಿ ಹೇಳಿಲ್ಲ ಎಂದು ನುಡಿದಿರುತ್ತಾರೆ. ನಿಮ್ಮ ತಮ್ಮ ನನ್ನ ಪ್ರಾಣ ರಕ್ಷಣೆಗಾಗಿ ಸಂತೆ ಮೈದಾನಕ್ಕೆ ಬಂದು ಕುಳಿತಿದ್ದೇನೆ ಎಂದು ಸಹ ತಿಳಿಸಿದ್ದಾನೆ ಎಂದರೆ ಸಾಕ್ಷಿ ಆ ರೀತಿ ಏನೂ ಹೇಳಿಲ್ಲ ಎಂದು ನುಡಿದಿದ್ದಾರೆ. ಅವರಿಂದ ಹೆದರಿಕೊಂಡು ಸಂತೆಮೈದಾನಕ್ಕೆ ಬಂದು ನಾನು ಕುಡಿಯುತ್ತ ಕುಳಿತಿದ್ದೇನೆ ಎಂದೂ ಸಹ ನನ್ನ ತಮ್ಮ ನನಗೆ ತಿಳಿಸಿದ್ದಾನೆ ಎಂದರೆ ಸಾಕ್ಷಿ - ನನ್ನ ತಮ್ಮ ಎಂದೂ ಸಹ ಕುಡಿಯುತ್ತಿರಲಿಲ್ಲ , ಆ ರೀತಿ ನನ್ನ ಮುಂದೆ ಹೇಳಿಲ್ಲ ಎಂದು ನುಡಿದಿರುತ್ತಾರೆ.

ಹಬಿದ್ ನಿಮ್ಮ ಸಂಬಂಧಿಕ ಎಂದರೆ ಸಾಕ್ಷಿ - ದೂರದಿಂದ ಸಂಬಂಧಿಕ ಎಂದು ನುಡಿದಿದ್ದಾರೆ.

ಹಬಿದ್ ನನ್ನು ಉಳಿಸಬೇಕು ಮತ್ತು ಅವರಿಗೆ ಸಹಾಯ ಮಾಡಿದ ಖಲಂದರ್ ಜಮೀರ್ ಹಾಗೂ ಮುಜಿಬುಲ್ಲಾಖಾನ್ ರವರನ್ನು ಉಳಿಸಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಾ ಎಂದರೆ ಸಾಕ್ಷಿ - ಸುಳ್ಳು ಹೇಳುತ್ತಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿ ಮುಂದುವರೆದು ಮನ್ಸೂರ್ ಮತ್ತು ನಸ್ರೂಲ್ಲಾ ಚಾಕು ಹಾಕಿ ನನ್ನ ತಮ್ಮನನ್ನು ಕೊಲೆ ಮಾಡಿರುವುದು ನಿಜ ಎಂದು ನುಡಿದಿದ್ದಾರೆ. ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ದಿ.17-03-2023 ರಂದು ನಾನು ಪೊಲೀಸ್ ಠಾಣೆಯ ಮುಂದೆ ಇದ್ದರೂ ಸಹ ಆ ಮೂರು ಜನರನ್ನು ಉಳಿಸುವ ಸಲುವಾಗಿ ಉದ್ದೇಶಪೂರ್ವಕವಾಗಿ ದೂರು ನೀಡಿಲ್ಲ ಎಂದರೆ ಸಾಕ್ಷಿ - ಆ ಸಮಯದಲ್ಲಿ ನಮ್ಮ ಸಂಬಂಧಿಕರು , ಕುಟುಂಬದವರು ಪೊಲೀಸ್ ಠಾಣೆಯ ಮುಂದೆ ಇದ್ದರು , ನಮ್ಮ ಸಂಬಂಧಿಕರೆಲ್ಲ ನಿವು ಹೆಣ್ಣುಮಕ್ಕಳಿದ್ದೀರಾ ಮನೆಗೆ ಹೋಗಿ ಎಂದು ಹೇಳಿ ಕಳುಹಿಸಿಬಿಟ್ಟರು ಎಂದು ನುಡಿದಿರುತ್ತಾರೆ. ಆ ರೀತಿ ನಾನು ಹುಟ್ಟಿಸಿಕೊಂಡು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ದಿ.17-03-2023 ರಂದು ಮಧ್ಯರಾತ್ರಿ ವೇಳೆಯಲ್ಲಿ ಹಬಿದುಲ್ಲಾ ಮತ್ತು ಫಾರುಕ್ ಮಧ್ಯ ಗಲಾಟೆಯಾಗಿರವುದರಿಂದ ಹಾಗೂ ಹಬಿದ್ ರವರು ಸಂಪೂರ್ಣವಾಗಿ ಕುಡಿದ ಮತ್ತು ಗಾಂಜಾದ ಅಮಲಿನಲ್ಲಿದ್ದ ಫಾರುಕ್ ನನ್ನು ದಬ್ಬಿದ್ದರಿಂದ ಆತ ಬಾಟಲಿ ಚೂರಿನ ಮೇಲೆ ಬಿದು, ಕುತ್ತಿಗೆ ಎಡಬಾಗದಲ್ಲಿ ಮತ್ತು ಬೆನ್ನಿಗೆ ಗಾಯಮಾಡಿಕೊಂಡು ಸಾವು ಸಂಭವಿಸಿದೆ ಎಂದು ಪ್ರಶ್ನಿಸಲಾಗಿ ಸಾಕ್ಷಿ - ಆ ರೀತಿ ಹೇಳುತ್ತಿರುವುದೆಲ್ಲ ಸುಳ್ಳು ಎಂದು ನುಡಿದಿರುತ್ತಾರೆ, ನನ್ನ ತಮ್ಮ ಎಂದೂ ಸಹ ಕುಡಿಯುವುದಿಲ್ಲ , ಗಾಂಜಾ ಸೇವಿಸುವುದಿಲ್ಲ ಎಂದು ನುಡಿದಿರುತ್ತಾರೆ.

ದಿ.17-03-2023 ರಂದು ನಿಮ್ಮ ತಮ್ಮನ ಶವವನ್ನು ಸಿಜಿ ಆಸ್ಪತ್ರೆಯಲ್ಲಿ ನೋಡಿದ ಸಂದರ್ಭದಲ್ಲಿ ಆ ಎರಡು ಗಾಯಗಳನ್ನು ಹೊರತುಪಡಿಸಿ ಬೇರೆ ಗಾಯಗಳನ್ನು ನೋಡಿದ್ದೀರಾ ಎಂದರೆ ಸಾಕ್ಷಿ - ನಾನು ಆ ಎರಡು ಗಾಯಗಳನ್ನು ಮಾತ್ರ ನೋಡಿದ್ದೇನ ಎಂದು ನುಡಿದಿದ್ದಾರೆ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸುಳ್ಳುನಿಂದ ಕೂಡಿವೆ ಎಂದರೆ ಸಾಕ್ಷಿ ಸುಳ್ಳು ಹೇಳಿಲ್ಲ ಎಂದು ನುಡಿದಿದ್ದಾರೆ.

<u>ಮರು ವಿಚಾರಣೆಃ-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.94/2023

PW- 06

CW- 19

ಪ್ರ. ಬೋ. ದಿನಾಂಕಃ 06-01-2024

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಮುಜಿಬುಲ್ಲಾ ಖಾನ್ |
| ತಂದೆ/ಗಂಡನ ಹೆಸರು | : | ಮಜಿದ್ ಖಾನ್ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಹೂವಿನ ವ್ಯಾಪಾರ |
| ವಾಸ | : | ಹೊನ್ನಾಳಿ |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಚಾಸಾ-10 ನನ್ನ ಮಗ. ಚಾಸಾ-9 ಹಬಿದುಲ್ಲಾ ನನಗೆ ಗೊತ್ತು. ನನಗೆ ಮೃತ ಫಾರುಕ್ ಉಲ್ಲಾ ಗೊತ್ತು. ಚಾಸಾ-11 ರಿಂದ 18 ನನಗೆ ಗೊತ್ತು, ಅವರು ನನ್ನ ಮಗನ ಸ್ನೇಹಿತರು. ಆರೋಪಿತರು ನನಗೆ ಗೊತ್ತು. ನಾನು ಹಣ್ಣು ಮತ್ತು ಹೂವಿನ ವ್ಯಾಪಾರ ಮಾಡುತ್ತೇನೆ.

ದಿ.16-03-2023 ರಂದು ನನ್ನ ಮಗ ಚಾಸಾ-10 ಖಲಂದರ್ ಜಮೀರ್ ಖಾನ್ ರಾತ್ರಿ ಮನೆಯಿಂದ 7-00 ಗಂಟೆಗೆ ಮನ್ಸೂರ್ ನ ಬರ್ತಡೇ ಪಾರ್ಟಿ ಎಂದು ಹೋಗಿದ್ದ. ಆತ ಹೋದ ನಂತರ ರಾತ್ರಿ 11-00 ಗಂಟೆಯಾದರೂ ನನ್ನಮಗ ಯಾಕೋ ಬರಲಿಲ್ಲ ಎಂದು ನನ್ನಮೋಬೈಲ್ ನಿಂದ ನನ್ನ ಮಗನ ಮೋಬೈಲ್ ಗೆ ಕರೆ ಮಾಡಿದೆ. 1 ನೇ ಆರೋಪಿ ನಸ್ರೂಲ್ಲಾ ಮಾತನಾಡಿದ. ನಾನು ಆತನಿಗೆ ನನ್ನ ಮಗ ಎಲ್ಲಿ ಎಂದು ಕೇಳಿದೆ. ಅದಕ್ಕೆ ಅವನು ಇಲ್ಲೇ ಎಲ್ಲೋ ಹೋಗಿದ್ದಾನೆ ಎಂದು ತಿಳಿಸಿದ. ರಾತ್ರಿ 11-15 ರಿಂದ 11-30 ಗಂಟೆ ಸುಮಾರಿಗೆ ನನ್ನ ಮಗ ಮನೆಗೆ ಬಂದ. ನನ್ನ ಮಗನಿಗೆ ಮೋಬೈಲ್ ಎಲ್ಲೋ ಎಂದು ಕೇಳಿದೆ , ಆಗ ಆತ 1 ನೇ ಆರೋಪಿ ಸಾಂಗ್ ಕೇಳಲು ಪಡೆದುಕೊಂಡ ಎಂದು ಹೇಳಿದ. ಸದರಿ ಪಾರ್ಟಿಗೆ ನನ್ನ ಮಗ , ತರಕಾರಿ ಖಲಂದರ್ , ಒಟ್ಟು ನಾಲ್ಕು ಜನ ಖಲಂದರ್ ಗಳು , ಸುಲೇಮಾನ್ , ತನ್ನು, ಇನ್ನು ಬಹಳ ಜನ ಹೋಗಿದ್ದೇವು ಎಂದು ಹೇಳಿದ. ನನ್ನ ಮಗ ನನಗೆ

ಟೈಮ್ ಆಗುತ್ತದೆ , ಮನೆಗೆ ಜಹೋಗಬೇಕು ಎಂದು 1 ನೇ ಆರೋಪಿಗೆ ಕೇಳಿದ , ಅದಕ್ಕೆ ಆತ ಇಲ್ಲ ಬೆಳಿಗ್ಗೆ ಕೊಡುತ್ತೇನೆ ಎಂದು ಹೇಳಿದ. ಆಗ 1 ನೇ ಆರೋಪಿ ನನ್ನ ಮಗನ ಮೊಬೈಲ್ ನಿಂದ ನನಗೆ ಪೊನ್ ಕರೆ ಮಾಡಿದ , ಆಗ ನಾನು ಆತನಿಗೆ ನನ್ನ ಮಗನ ಫೋನ್ ಕೊಡುವುದಲ್ಲವಾ ಎಂದು ಕೇಳಿದೆ ಅದಕ್ಕೆ ಆತ ನನಗೆ ಬೋಳಿ ಮಗನೆ , ಮಿಂಡ್ರಿ ಮಗನೆ ಎಂದು ಬೈದು , ದಮ್ಮ ಇದ್ದರೆ ಬಂದು ಇಸಿದುಕೊಂಡು ಹೋಗು ಎಂದು ಹೇಳಿ ಫೋನ್ ಕರೆ ಕಟ್ ಮಾಡಿದ. ನಂತರ ನಾನು ಮತ್ತು ನನ್ನ ಮಗ ಚಾಸಾ-10 ಫೋನ್ ಪಡೆದುಕೊಂಡು ಬರು ಜೊತೆಯಲ್ಲಿ ಹೋಗುತ್ತಿದ್ದೇವು, ಆಗ ಬಿ ಎಸ್ ಎನ್ ಎಲ್ ಆಫೀಸ್ ಹತ್ತಿರ ಫಾರುಕ್ ಮತ್ತು ಹಬಿದ್ ಮಾತನಾಡುತ್ತ ಕುಳಿತಿದ್ದರು. ನಾವು ಅವರ ಬಳಿ ಹೋಗಿ ಹಬಿದ್ ನಿಗೆ ನನ್ನ ಮಗನ ಫೋನನ್ನು ನಸ್ರೂಲ್ಲಾ ಮತ್ತು ಮನ್ಸೂರ್ ಕಡೆಯಿಂದ ಕೊಡಿಸು ಎಂದು ಕೇಳಿದೆ. ಅವರಿಬ್ಬರೂ ನನ್ನ ಮಗನನ್ನು ಕರೆದುಕೊಂಡು ಗಾಡಿಯಲ್ಲಿ ಪಾರ್ಟಿ ಮಾಡುತ್ತಿದ್ದ ಜಾಗಕ್ಕೆ ಹೋದರು. ನಾನು ಅಲ್ಲಿಂದ ಮನೆಗೆ ಹೋಗಿದ್ದೇನೆ. ಆ ದಿನ ಮಧ್ಯ ರಾತ್ರಿ ಮನೆಗೆ 3-00 ಗಂಟೆಗೆ ಬಂದು ಅಪ್ಪಾಜಿ ನಾವು ಫೋನ್ ಕೇಳಲು ಹೋಗಿದ್ದೇವು, ಹಬಿದ್ ನಸ್ರೂಲ್ಲಾನಿಗೆ ಫೋನ್ ಕೊಡಪ್ಪ ಎಂದು ಕೇಳಿದ , ಅದಕ್ಕೆ ಅವನು ಕೊಡಲ್ಲಹೋಗು ಎಂದು ಆತನಿಗೆ ದಬಾಯಿಸಿದ. ಆಗ ಫಾರುಕ್ ಫೋನ್ ಕೊಡು ಎಂದು ಕೇಳಿದ . ಏ ನಿನ್ನನ್ನು ಇಲ್ಲೇ ಸಾಯಿಸಿಬಿಡುತ್ತೇನೆ ಎಂದು ಬೆದರಿಕೆ ಹಾಕಿ , ಎಡಭಾಗದ ಕುತ್ತಿಗೆಗೆ ಫಾರುಕ್ ನಿಗೆ ಹಾಕಿದ. ಹಬಿದ್ ಬಿಡಿಸಲು ಹೋದಾಗ ಮನ್ಸೂರ್ ಆತನಿಗೆ ಮುಷ್ಟಿಯಿಂದ ಎದೆಗೆ ಮತ್ತು ಕಣ್ಣಿಗೆಹೊಡೆದ. ಹಿಂದಿನಿಂದ ಮನ್ಸೂರ್ ಬಂದು ಫಾರುಕ್ ನ ಬೆನ್ನಿಗೆ ಚಾಕು ಹಾಕಿದ ಎಂದು ನನ್ನ ಮಗ ಹೇಳಿದ. ಅದರಿಂದ ಫಾರುಕ್ ಸ್ಥಳದಲ್ಲೇ ಸತ್ತಿದ್ದಾನೆ ಎಂದು ತಿಳಿಸಿದ. ನನ್ನ ಮಗ ಚಾಸಾ-10 ಹೆದರಿ, ದಾವಣಗೆರೆಯ ನನ್ನ ಸೊಸೆಯ ಮನೆಯಲ್ಲಿ ವಾಸವಾಗಿದ್ದಾನೆ. ಅವನಿಗೆ ನೀನು ಸಾಕ್ಷಿ ಹೇಳಬೇಡ ಎಂದು ಆತನಿಗೆ ಹೆದರಿಸಿದ್ದರಿಂದ ಆ ರೀತಿ ದಾವಣಗೆರೆಯಲ್ಲಿ ವಾಸ ಮಾಡುತ್ತಿದ್ದಾನೆ. ಆರೋಪಿ ನಸ್ರೂಲ್ಲಾ ಮತ್ತು ಮಸ್ರೂನನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ನಸ್ರೂಲ್ಲಾ ಎಂದು ಗುರುತಿಸಿರುತ್ತಾರೆ.

<u>ಪಾಟೀಸವಾಲುಃ-</u> ಆರೋಪಿ ಪರ ಶ್ರೀ ಕೆ ಎನ್ ಆರ್ ವಕೀಲರಿಂದ.

ಆರೋಪಿಪರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೇಳಿರುತ್ತಾರೆ.

ಕಾಲಾವಕಾಶ ನೀಡಿ ಪಾಟೀಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

ಇಂದು ದಿ.25-01-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣಿಕರಿಸಲಾಯಿತು.

<u>ಪಾಟೀಸವಾಲುಃ-</u> ಆರೋಪಿ ಪರ ಶ್ರೀ ಕೆ ಎನ್ ಆರ್ ವಕೀಲರಿಂದ.

ಹೊನ್ನಾಳಿ ಮುಖ್ಯ ರಸ್ತೆಯಿಂದ ನಿಮ್ಮ ಮನೆ ಎಷ್ಟು ದೂರದಲ್ಲಿದೆ ಎಂದೆರ ಸುಮಾರು ಅರ್ಧ ಕಿ.ಮಿ. ದೂರದಲ್ಲಿದೆ ಎಂದು ನುಡಿದಿದ್ದಾರೆ. ಬ್ರಾಹ್ಮಣ ಬೀದಿಯಿಂದ ನಿಮ್ಮ ಮನೆ ಎಷ್ಟು ದೂರದಲ್ಲಿದೆ ಎಂದರೆ ಸಾಕ್ಷಿ ಸುಮಾರು ಒಂದು ಕಿಮಿ ಕಿಂತ ಸ್ವಲ್ಪ ಕಮ್ಮಿ ಇದೆ ಎಂದು ನುಡಿದಿರುತ್ತಾರೆ. ಬ್ರಾಹ್ಮಣರ ಬೀದಿಯಲ್ಲಿ ರಮಾಬಾಯಿ ಎನ್ನುವವರಿಗೆ ಸೇರಿದ ಆಸ್ತಿಗಳು ಇವೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿದಿದ್ದಾರೆ. ನಾನು ಜಿಯೋ ಸಿಮ್ ಉಪಯೋಗಿಸುತ್ತೇನೆ. ಬ್ರಾಹ್ಮಣರ ಬೀದಿಯಲ್ಲಿ ಜಿಯೋಸಿಮ್ ಟವರ್ ಇದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಟಿ ಬಿ ಸರ್ಕಲ್ ನಿಂದ ನಿಮ್ಮ ಮನೆ ಎಷ್ಟು ದೂರದಲ್ಲಿದೆ ಎಂದರೆ ಸಾಕ್ಷಿ ಒಂದು ವರೆ ಕಿಮಿ ದೂರದಲಿದೆ ಎಂದು ನುಡಿದಿದ್ದಾರೆ. ನಿಮ್ಮ ಊರಿನಲ್ಲಿ ಹಳೆ ಸಂತೆ ಮೈದಾನ ಇದೆ ಎಂದರೆ ಸಾಕ್ಷಿ ಇದೆ ಎಂದು ನುಡಿದಿದ್ದಾರೆ. ಹಳೆ ಸಂತೆ ಮೈದಾನ ಮತ್ತು ನಿಮ್ಮ ಮನೆಗೆ ಇರುವ ಅಂತರ ಎದರೆ - ಸುಮಾರು ಒಂದು ಕಿಮೀ ಇದೆ ಎಂದು ನುಡಿದಿದ್ದಾರೆ. ಹಳೆ ಸಂತೆ ಮೈದಾನ ಮತ್ತು ಗೊಲ್ಲರಹಟ್ಟಿ ಎಷ್ಟು ದೂರದಲ್ಲಿದೆ ಎಂದರೆ ಸುಮಾರು ಎರಡು ಕಿಮೀ ದೂರ ಇದೆ ಎಂದು ನುಡಿದಿದ್ದಾರೆ. ತುಂಗಾ ನದಿಗೆ ಇರುವ ಸೇತುವೆಗೂ ನಿಮ್ಮ ಮನೆಗೂ ಎಷ್ಟು ದೂರ ಎಂದರೆ ಸಾಕ್ಷಿ ಸುಮಾರು ಎರಡುವರೆ ಕಿಮಿ ದೂರ ಇದೆ ಎಂದು ನುಡಿದಿದ್ದಾರೆ.

ಬಿಎಸ್ ಎನ್ ಎಲ್ ಕಛೇರಿ ಬಳಿ ಹಬಿದ್ ಮತ್ತು ಮೃತ ಫಾರುಕ್ ಕುಳಿತಿದ್ದಾಗ ಎಷ್ಟು ಗಂಟೆಯಾಗಿತ್ತು ಎಂದರೆ ಸಾಕ್ಷಿ ರಾತ್ರಿ ಸುಮಾರು 11-15 ಗಂಟೆಯಾಗಿತ್ತು ಎಂದು ನುಡಿದಿದ್ದಾರೆ. ಹಬಿದ್ ಮತ್ತು ಮೃತ ಫಾರುಕ್ ನಿಗೆ ವಿಷಯ ತಿಳಿಸಲು ಎಷ್ಟು ಗಂಟೆಯಾಯಿತು ಎಂದರೆ ಸಾಕ್ಷಿ - ಸುಮಾರು ಅರ್ಧ ಗಂಟೆ ಒಳಗೆ ಆಗಿರುತ್ತದೆ ಎಂದು

ನುಡಿದಿರುತ್ತಾರೆ. ಆ ರೀತಿ ಮಾತನಾಡಿದ ನಂತರ ನಿಮ್ಮ ಮಗ ಮತ್ತು ಇಬ್ಬರನ್ನು ಕಳುಹಿಸಿಕೊಟ್ಟಾಗ ಎಷ್ಟು ಗಂಟೆಯಾಗಿತ್ತು ಎಂದರೆ ಸಾಕ್ಷಿ - ರಾತ್ರಿ 12-00 ಗಂಟೆ ಒಳಗೆ ಐದು ಹತ್ತು ನಿಮಿಷ ಎಂದು ನುಡಿದಿದ್ದಾರೆ. ಆ ಮೂರು ಜನರು ಯಾವ ರೀತಿ ಹೋದರು ಎಂದರೆ ಎರಡು ಮೋಟರ್ ಸೈಕಲ್ ಗಳಲ್ಲಿ ಹೋಗಿದ್ದಾರೆ ಎಂದು ನುಡಿದಿದ್ದಾರೆ. ಒಂದು ಬೈಕನ್ನು ನನ್ನ ಮಗನೇ ಚಾಲನೆ ಮಾಡಿಕೊಂಡು ಹೋಗಿದ್ದಾನೆ. ಸದರಿ ಬೈಕ್ ಯಾರದು ಎಂದರೆ ಸಾಕ್ಷಿ - ನಮ್ಮ ಮನೆಯ ಎದುರು ಇರುವ ಕುರುಬರ ಪೈಕಿ ಎಂದು ನುಡಿದಿದ್ದಾರೆ. ಇನ್ನೊಂದು ಬೈಕ್ ಯಾರದು ಎಂದರೆ ಸಾಕ್ಷಿ ಹಬಿದುಲ್ಲಾನದು ಎಂದು ನುಡಿದಿದ್ದಾರೆ. ಹಬಿದ್ ಎನ್ನುವವನೇ ಮೋಟರ್ ಸೈಕಲ್ ಚಾಲನೆ ಮಾಡಿಕೊಂಡು ಹೋಗಿದ್ದಾನೆ. ಫಾರುಕ್ ಯಾವ ಮೋಟರ್ ಸೈಕಲ್ ನಲ್ಲಿ ಕುಳಿತ ಎಂದರೆ ಸಾಕ್ಷಿ ಹಬಿದ್ ನ ಮೋಟರ್ ಸೈಕಲ್ ನಲ್ಲಿ ಕುಳಿತುಕೊಂಡ ಎಂದು ನುಡಿದಿರುತ್ತಾರೆ. ಕೊಲೆಯಾದ ಜಾಗವನ್ನು ನೀವು ನೋಡಿದ್ದೀರಾ ಎಂದರೆ ಸಾಕ್ಷಿ ಘಟನೆಯಾದ ಮಾರನೇ ದಿನ ಬೆಳಿಗ್ಗೆನೋಡಿದ್ದೇನೆ ಹಾಗೂ ಆ ಜಾಗವನ್ನು ನಾನು ಈ ಹಿಂದೆಯೂ ಸಹ ನೋಡಿದೆ. ಕೊಲೆಯಾದ ಜಾಗದಲ್ಲಿ ನೀರು ಹರಿಯುತ್ತದೆ ಎಂದರೆ ಸಾಕ್ಷಿ ಆ ಜಾಗದಲ್ಲಿ ನೀರು ಹರಿಯುವುದಿಲ್ಲ ಎಂದು ನುಡಿದಿರುತ್ತಾರೆ. ಆ ಜಾಗದಲ್ಲಿ ಮರಳು, ಮಣ್ಣು, ಕಲ್ಲು, ಬಾಟಲಿಯ ಚೂರುಗಳು ಎಲ್ಲಾ ಬಿದ್ದಿರುತ್ತದೆ ಎಂದರೆ ಸಾಕ್ಷಿ - ಆ ಜಾಗದಲ್ಲಿ ಹುಡುಗರು ಹೋಗುತ್ತಿರುತ್ತಾರೆ , ಪಾರ್ಟಿ ಮಾಡುತ್ತಿರುತ್ತಾರೆ ಎಂದು ನುಡಿದಿರುತ್ತಾರೆ. ಆ ಸ್ಥಳಕ್ಕೆ ಮೋಟರ್ ಸೈಕಲ್ ನಲ್ಲಿ ಹೋಗಲು ಆಗುವುದಿಲ್ಲ, ನದಿ ದಂಡೆಯಲ್ಲಿ ಮೋಟರ್ ಸೈಕಲ್ ನಿಲ್ಲಿಸಿ ಅಲ್ಲಿಗೆ ಹೋಗಬೇಕು ಎಂದರೆ ಸಾಕ್ಷಿ ಹೋಗಲು ದಾರಿ ಇದೆ ಎಂದು ನುಡಿದಿದ್ದಾರೆ. ಆ ಜಾಗಕ್ಕೆ ಮೋಟರ್ ಸೈಕಲ್ ಹೋಗಲು ಆಗುವುದಿಲ್ಲ ಎನ್ನುವುದು ಸರಿಯಲ್ಲ.

ಮೋಬೈಲ್ ನಂ.8867540508 ಇದು ನಿಮ್ಮ ಮೋಬೈಲ್ ನಂಬರ್ ಎಂದರೆ ಸಾಕ್ಷಿ ಹೌದು ಎಂದು ನುಡಿದಿದ್ದಾರೆ. ಮೋಬೈಲ್ ನಂ.9036170945 ಇದು ನನ್ನ ಮಗನ ಮೋಬೈಲ್ ನಂಬರ್ ಎಂದರೆ ಸಾಕ್ಷಿ - ನನಗೆ ನೆನಪಿರುವುದಿಲ , ಅನುಮತಿ ಕೊಟ್ಟರೆ ಹೆಂಡತಿಗೆ ಕರೆ ಮಾಡಿ ತಿಳಿದುಕೊಂಡು ಹೇಳುತ್ತೇನೆ ಎಂದು ನುಡಿಯುತ್ತಾರೆ. ಆದರೆ ಕೊನೆಯ ನಂಬರ್ 5 ಆಗಿತ್ತು ಎಂದರೆ ಸಾಕ್ಷಿ ಜ್ಞಾಪಕ ಇಲ್ಲ ಎಂದು ನುಡಿದಿರುತ್ತಾರೆ. ಮೋಬೈಲ್ ನಂ.9036493085 ನಿನ್ನ ಹೆಂಡತಿಯ ಫೋನ್ ನಂಬರ್ ಎಂದರೆ ಸಾಕ್ಷಿ ಹೌದು ಎಂದು ನುಡಿದಿದ್ದಾರೆ.

ಅಮ್ಜದ್ ಖಾನ್  ಎನ್ನುವವರು ನಿಮ್ಮ ದಾಯಾದಿ ಇದ್ದಾರಾ ಎಂದರೆ ಸಾಕ್ಷಿ ಆ ಹೆಸರಿನವರು ಇಲ್ಲ ಎಂದು ನುಡಿದಿದ್ದಾರೆ.  ನಯಾಜ್ ಖಾನ್ ಎನ್ನುವವರು ನಿಮ್ಮ ಸಂಬಂಧಿಕರಿದ್ದಾರಾ ಎಂದರೆ ಸಾಕ್ಷಿ ಇದ್ದಾರೆ ಎಂದು ನುಡಿದಿರುತ್ತಾರೆ. ಸದರಿ ನಯಾಜ್ ಖಾನ್ ರಿಯಲ್ ಎಸ್ಟೇಟ್ ವ್ಯಾಪಾರ ಮಾಡುತ್ತಾರೆ ಎನ್ನುವುದು ಸರಿ. ಅಮ್ಜದ್ ಖಾನ್ ರವರು ಕಾರ್ ಮೆಕಾನಿಕ್ ಮತ್ತು ಕಾರ್ ಮಾರಾಟ ಮಾಡುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿದ್ದಾರೆ.  ಇಸ್ಮಾಯಿಲ್ ಹುಬ್ಬಳ್ಳಿ ಎನ್ನುವ ವ್ಯಕ್ತಿಯ ಪರಿಚಯ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಇಸ್ಮಾಯಿಲ್ ಹುಬ್ಬಳ್ಳಿ ಎನ್ನುವವರು ಹುಬ್ಬಳ್ಳಿಯ ವ್ಯಕ್ತಿ , ಅವರು ನಿಮಗೆ ಪರಿಚಯವಿದ್ದಾರಾ ಎಂದರೆ - ಪರಿಚಯವಿಲ್ಲ ಎಂದು ನುಡಿದಿರುತ್ತಾರೆ. ಹೊನ್ನಾಳಿಯಲ್ಲಿ ಹಣ್ಣು ಮಾರುವ ಆರಿಫ್ ಪರಿಚಯವಿದ್ದಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಆರಿಫ್ ರವರು ಹೊನ್ನಾಳಿಯಲ್ಲಿ ಹಣ್ಣುಮಾರುವವರಲ್ಲಿ ಪ್ರಮುಖರಿದ್ದಾರೆ ,  ಅವರ ಪರಿಚಯ ನಿಮಗೆ ಇದೆಯೇ ಎಂದರೆ ಸಾಕ್ಷಿ ಪರಿಚಯವಿಲ್ಲ ಎಂದು ನುಡಿದಿರುತ್ತಾರೆ. ರಾತ್ರಿ 11-25.23 ಸೆಂಕೆಂಡ್ ಗೆ ನಿಮ್ಮ ಮಗ ಖಲದರ್ ಕಡೆಯಿಂದ ನಿನಗೆ ಫೋನ್ ಬಂದಿದೆ ಎಂದರೆ ಸಾಕ್ಷಿ - ನನಗೆ ಮೊದಲು ಬಂದಿಲ್ಲ , ನಾನು ಮೊದಲು ನನ್ನ ಮಗನಿಗೆ ಯಾಕೋ ಬಂದಿಲ್ಲ ಎಂದು  ಕಾಲ್ ಮಾಡಿದ್ದು  ಎಂದು ನುಡಿದಿರುತ್ತಾರೆ. ಸಾಕ್ಷಿ ಮುಂದುವರೆದು -  ನಾನು ಆ ರೀತಿ ಕರೆ ಮಾಡಿದಾಗ ಅವನು ಇಲ್ಲ , ಎಲ್ಲೋ ಟೀ ತರಲು ಹೋಗಿದ್ದಾನೆ ಎಂದು ನಸರುಲ್ಲಾ ನನಗೆ ಹೇಳಿದ್ದಾನೆ ಎಂದು ನುಡಿದಿದ್ದಾರೆ. ನಸರೂಲ್ಲಾ ಆ ರೀತಿ ನಿಮಗೆ ಹೇಳಿದಾಗ ಎಷ್ಟು ಗಂಟೆಯಾಗಿತ್ತು ಎಂದರೆ - 11-00 ರಿಂದ 11-10 ಗಂಟೆ ಒಳಗೆ ಎಂದು ನುಡಿದಿದ್ದಾರೆ. 3 ನೇ ಬಾರಿಗೆ ಅದೇ ನಂಬರ್ ನಿಂದ ನಿಮಗೆ ಕಾಲ್ ಬಂದಾಗ ಯಾರು ಮಾತನಾಡಿದರು ಎಂದರೆ ಸಾಕ್ಷಿ - ಮನ್ಸೂರ್ ಮಾತನಾಡಿದ್ದಾನೆ ಎಂದು ನುಡಿದಿದ್ದಾರೆ. ಆ ದಿನ ಮನ್ಸೂರ್ ನಿಮ್ಮ ಬಳಿ ಏನು ಮಾತನಾಡಿದ್ದಾನೆ ಎಂದರೆ ಸಾಕ್ಷಿ - ಮಾತನಾಡಿದ್ದಷ್ಟು ಹೊತ್ತು ಬೈದಿದ್ದಾನೆ ಎಂದು ನುಡಿದಿದ್ದಾರೆ.

ದಿ.16-03-2023 ರಂದು ರಾತ್ರಿ 11-36.38 ಗಂಟೆಗೆ ಅದೇ ನಂಬರ್ ನಿಂದ 4 ನೇ ಬಾರಿ ನಿಮಗೆ ಫೋನ್ ಕರೆ ಬಂದಾಗ ಯಾರು ಮಾತನಾಡಿದ್ದಾರೆ ಎಂದರೆ ಸಾಕ್ಷಿ -  ಹಬಿದ್ ಮತ್ತು ಇತರರು  ಮಾತನಾಡಿದ್ದಾರೆ ಎಂದು ನುಡಿದಿದ್ದಾರೆ.  ಸಾಕ್ಷಿ ಮುಂದುವರೆದು ಆ ದಿನ ಆ ರಾತ್ರಿ ಆರ ರಿಂದ ಏಳು ಕರೆ ಬಂದಿವೆ, ಕರೆ ಬಂದಾಗ ನಡಿಯಪ್ಪ ಹೋಗೋಣ ಎಂದು ಹೇಳಿ ನನ್ನ ಮಗನನ್ನು ಕರೆದುಕೊಂಡು ಹೋಗಿ , ಬಿಎಸ್ ಎನ್ ಎಲ್ ಕಛೇರಿಯಿಂದ

ಹಬಿದ್ ಮತ್ತು ಫಾರುಕ್ ನನ್ನು ನನ್ನ ಮಗನ ಜೊತೆ ಕಳುಹಿಸಿದ್ದೇನೆ ಎಂದು ನುಡಿದಿದ್ದಾರೆ. ಉಳಿದ ನಾಲ್ಕು ಕರೆಗಳನ್ನು ಯಾರು ಮಾಡಿದ್ದಾರೆ ಎಂದರೆ ಮನ್ಸೂರ್ ಮತ್ತು ನಸ್ರುಲ್ಲಾ ಇಬ್ಬರು ಸೇರಿಮಾತನಾಡಿದ್ದಾರೆ ಎಂದು ನುಡಿದಿದ್ದಾರೆ.

ಆ ರೀತಿ ಮಾಡಿದ ಏಳೂ ಕರೆಗಳನ್ನು ಮನ್ಸೂರ್ , ನಸ್ರೂಲ್ಲಾ ಇಬ್ಬರೆ ಮಾಡಿದ್ದಾರೆ ಹಾಗೂ ಅವರೇ ಮಾತನಾಡಿದ್ದಾರೆ ಎಂದು ನೀವು ಪೊಲೀಸರ ಮುಂದೆ ಹೇಳಿದ್ದೀರಾ ಎಂದರೆ ಸಾಕ್ಷಿ - ಏಳೂ ಕರೆಗಳನ್ನು ಅವರೇ ಮಾಡಿದ್ದಾರೆ ಎಂದು ನಾನು ಹೇಳಿಲ್ಲ ಆದರೆ ಈ ವಿಷಯವನ್ನು ನಾನು ಪೊಲೀಸರ ಮುಂದೆ ಹೇಳಿಲ್ಲ. ಆ ವಿಷಯವನ್ನು ಪೊಲೀಸರ ಮುಂದೆ ಹೇಳಲು ನಿಮಗೆ ಅಡ್ಡಿ ಆತಂಕ ಇತ್ತಾ ಎಂದರೆ ಸಾಕ್ಷಿ ಇರಲಿಲ್ಲ ಎಂದು ನುಡಿದಿರುತ್ತಾರೆ. ಆ ಏಳೂ ಕರೆಗಳನ್ನು ನೀವು ಎಲ್ಲಿ ಇದ್ದಾಗ ಸ್ವೀಕರಿಸಿದ್ದೀರಿ ಎಂದರೆ ಸಾಕ್ಷಿ - ನಾನು ಮನೆಯಲ್ಲಿದ್ದಾಗ ಮೂರು ಕರೆಗಳು ಬಂದಿದ್ದವು , ಬಿಎಸ್ ಎನ್ ಎಲ್ ಕಛೇರಿ ಬಳಿ ಇದ್ದಾಗ ನಾಲ್ಕು ಕರೆಗಳು ಬಂದಿರುತ್ತವೆ ಎಂದು ನುಡಿದಿರುತ್ತಾರೆ. ಸಾಕ್ಷಿ ಮುಂದುವರೆದು ಆ ಕರೆಯಲ್ಲಿ ನಸ್ರೂಲ್ಲಾ ನನಗೂ ಸಹ ಬೆಳಿಗ್ಗೆ ಹೊಡೆಯುತ್ತೇನೆ ಎಂದು ಬೆದರಿಕೆ ಹಾಕಿದ್ದಾನೆ ಎಂದು ನುಡಿದಿರುತ್ತಾರೆ. ನಿಮಗೆ ಬೆದರಿಕೆ ಹಾಕಿದಾಗ ಎಷ್ಟು ಗಂಟೆಯಾಗಿತ್ತು ಎಂದರೆ ಸಾಕ್ಷಿ ರಾತ್ರಿ 11-00 ರಿಂದ 12-00 ಗಂಟೆಯಲ್ಲಿ ಇವೆಲ್ಲ ನಡೆದಿರುತ್ತವೆ ಎಂದು ನುಡಿದಿರುತ್ತಾರೆ. ಆಗ ನೀವು ಠಾಣೆಗೆ ಹೋಗಿ ನನಗೆ ಬೆದರಿಕೆ ಹಾಕುತ್ತಿದ್ದಾರೆ ಎಂದು ದೂರು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ದೂರು ಕೊಟ್ಟಿಲ್ಲ ಎಂದು ನುಡಿದಿರುತ್ತಾರೆ. ಈ ವಿಷಯವನ್ನು ಪೊಲೀಸರಿಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿ ತಿಳಿಸಿಲ್ಲ ಎಂದು ನುಡಿದಿರುತ್ತಾರೆ.

ಬಿಎಸ್ ಎನ್ ಎಲ್ ಕಛೇರಿಯಿಂದ ನೀವು ಎಲ್ಲಿಗೆ ಹೋದಿರಿ ಎಂದರೆ ಸಾಕ್ಷಿ ನಾನು ಮನಗೆ ಹೋದೆ ಎಂದು ನುಡಿದಿರುತ್ತಾರೆ. ನೀವು ಮನೆಗೆ ಹೋದಾಗ ಅಂದಾಜು ಎಷ್ಟು ಗಂಟೆಯಾಗಿತ್ತು ಎಂದರೆ ಸಾಕ್ಷಿ - ಸುಮಾರು 11-45 ಗಂಟೆಯಾಗಿತ್ತು ಎಂದು ನುಡಿದಿರುತ್ತಾರೆ. ಮನೆಗೆ ಸೇರಿಕೊಂಡ ನಂತರ ನೀವು ಆ ದಿನ ರಾತ್ರಿ ಮನೆ ಬಿಟ್ಟು ಹೋಗಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿದ್ದಾರೆ. ನೀವು ಮನೆಗೆ ಬಂದಾಗ ನಿಮ್ಮ ಫೋನ್ ನಿಮ್ಮ ಹತ್ತಿರ ಇತ್ತಾ ಎಂದರೆ ಸಾಕ್ಷಿ ಇತ್ತು ಎಂದು ನುಡಿದಿದ್ದಾರೆ.

ದಿ.16-03-2023 ರ ರಾತ್ರಿ 11-51.54 ಸೆಕೆಂಡ್ ಗೆ ನೀವು ನಿಮ್ಮ ಹೆಂಡತಿಯ ಫೋನ್ ನಂಬರ್ ಗೆ ಕರೆ ಮಾಡಿ 58 ಸೆಕೆಂಡ್ ಮಾತನಾಡಿದ್ದೀರಾ , ಏನು ಮಾತನಾಡಿದ್ದೀರಾ ಎಂದರೆ

ಸಾಕ್ಷಿ - ನನ್ನ ಹೆಂಡತಿ ಕರೆ ಮಾಡಿಲ್ಲ , ಆ ಸಮಯದಲ್ಲಿ ನನ್ನ ಫೋನ್ ಚಾಸಾ-9 ಹಬಿದ್ ಬಳಿ ಇತ್ತು ಎಂದು ನುಡಿದಿರುತ್ತಾರೆ. ಅಂದರೆ ಹಬಿದ್ ನಿಮ್ಮ ಹೆಂಡತಿಗೆ ಕರೆ ಮಾಡಿದ್ದಾನಾ ಎಂದರೆ ಸಾಕ್ಷಿ - ಹಬಿದ್ ಕರೆ ಮಾಡಿಲ್ಲ , ನನ್ನ ಹೆಂಡತಿ ನನ್ನ ಫೋನ್ ಗೆ ಕರೆ ಮಾಡಿರುವುದು , ಆ ಸಮಯದಲ್ಲಿ ನನ್ನ ಫೋನ್ ಹಬಿದ್ ಬಳಿ ಇತ್ತು ಎಂದು ನುಡಿದಿರುತ್ತಾರೆ . ಆ ಸಮಯದಲ್ಲಿ ಹಬಿದ್ ನ ಬಳಿ ನಿಮ್ಮ ಫೋನ್ ಇತ್ತು , ಆತ ಗೊತ್ತಿಲ್ಲದೇ ನನ್ನ ಹೆಂಡತಿ ಜೊತೆ ಮಾತನಾಡಿದ್ದಾನೆ ಎಂದು ನೀವು ಪೊಲೀಸರ ಮುಂದೆ ಹೇಳಿದ್ದೀರಾ ಎಂದರೆ ಸಾಕ್ಷಿ ಹೇಳಿಲ್ಲ ಎಂದು ನುಡಿದಿರುತ್ತಾರೆ. ಆ ರೀತಿ ನಿಮ್ಮ ಹೆಂಡತಿ ಕರೆ ಮಾಡಿದಾಗ ಹಬಿದ್ ಎಲ್ಲಿದ್ದರು ಎಂದರೆ ಸಾಕ್ಷಿ -ಬಿಎಸ್ ಎನ್ ಎಲ್ ಕಛೇರಿ ಬಳಿ ಇದ್ದ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ನ್ಯಾಯಾಲಯವು ಆಗ ನೀನು ಎಲ್ಲಿ ಇದ್ದೆ ಎಂದು ಪ್ರಶ್ನಿಸಿದಾಗ ಸಾಕ್ಷಿ - ನಾನೂ ಸಹ ಬಿ ಎಸ್ ಎನ್ ಎಲ್ ಕಛೇರಿ ಬಳಿ ಇದ್ದೆ ಎಂದು ನುಡಿದಿರುತ್ತಾರೆ. ಆ ಕರೆಯನ್ನು ನೀವೆ ಸ್ವೀಕಾರ ಮಾಡಿದ್ದೀರಾ , ಆ ಸಮಯದಲ್ಲಿ ನೀವು ಬ್ರಾಹ್ಮಣರ ಬೀದಿಯಲ್ಲಿದ್ದೀರಿ ಎಂದರೆ ಸಾಕ್ಷಿ - ನಾನು ಬ್ರಾಹ್ಮಣರ ಬೀದಿಯಲ್ಲಿರಲಿಲ್ಲ ಎಂದು ನುಡಿದಿದ್ದಾರೆ.

ದಿ.16-03-2023 ರ ರಾತ್ರಿ 11-53.37 ಸೆಕೆಡ್ ಗಳಿಗೆ ನೀವು ನಿಮ್ಮ ಮಗನ ಜೊತೆ 211 ಸೆಕೆಂಡ್ ಮಾತನಾಡಿದ್ದೀರಾ, ಏನು ಮಾತನಾಡಿದ್ದೀರಾ ಎಂದರೆ ಸಾಕ್ಷಿ ನಾನು ನನ್ನ ಮಗನ ಜೊತೆ ಮಾತನಾಡಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿ ಮುಂದುವರೆದು ಆರೋಪಿತರೇ ಮಾತನಾಡಿದ್ದಾರೆ ಎಂದು ನುಡಿದಿರುತ್ತಾರೆ.

ಮುಂದುವರೆದ ಪಾಟೀಸವಾಲಿಗೆ ವಕೀಲರು ಪಾಟೀಸವಾಲು ಮಾಡುವುದಿಲ್ಲ ಎಂದು ತಿಳಿಸಿದ್ದರಿಂದ ಮುಂದುವರೆದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

<u>ಮರು ವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>

<u>S.C.94/2023</u>

PW- 07

CW- 02

ಪ್ರ. ಬೋ. ದಿನಾಂಕಃ 08-01-2024

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಶಕಿಲ್ ಅಹ್ಮದ್ |
| ತಂದೆ/ಗಂಡನ ಹೆಸರು | : | ಶಬ್ಬಿರ್ ಅಹ್ಮದ್ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ | : | ಹೊನ್ನಾಳಿ |

<u>ಮುಖ್ಯ ವಿಚಾರಣೆಃ</u> ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಚಾಸಾ-3 ರಿಂದ 6 ನನಗೆ ಗೊತ್ತು. ನನಗೆ ಮೃತ ಫಾರುಕ್ ಉಲ್ಲಾ ಗೊತ್ತು ಆತ ನನ್ನ ಸ್ನೇಹಿತ. ಚಾಸಾ-1 ನನಗೆ ಗೊತ್ತು. ಸದರಿ ಫಾರುಕ್ ಉಲ್ಲಾ ರವರ ಕೊಲೆಯಾಗಿರುತ್ತದೆ.

ಮಾರ್ಚ್-17 ನೇತಾರೀಖು , 2023 ರಂದು ನಾನು ದಾವಣಗೆರೆ ಚಿಗಟೇರಿ ಆಸ್ಪತ್ರೆಯಲ್ಲಿ ಫಾರುಕ್ ಉಲ್ಲಾನ ಮೃತ ದೇಹವನ್ನು ನೋಡಿದ್ದೇನೆ. ಆತನ ಬೆನ್ನು ಮತ್ತು ಕುತ್ತಿಯಲ್ಲಿ ಎರಡು ಮೂರು ಇಂಚು ಅಗಲ ಗಾಯವಾಗಿತ್ತು. ಪೊಲೀಸರು ನಮ್ಮನ್ನು ಕರೆದು ಫೋಟೋ ತೆಗೆಸಿದ್ದಾರೆ. ಆ ಸಮಯದಲ್ಲಿ ಅಮ್ಜದ್ ಪಾಷಾ , ಆರಿಫಾ ಶರಿಫ್, ಮಹಬೂಬ್ ಶರಿಫ್ ಮತ್ತು ರಾಜಿಕಾ ಬೇಗಂ ರವರು ಇದ್ದರು. ಆತನನ್ನು ಚಾಕುವಿನಿಂದ ಹೊಡೆದು ನಸ್ರೂಲ್ಲಾ ಮತ್ತು ಮನ್ಸೂರು ರವರು ಕೊಲೆ ಮಾಡಿದ್ದಾರೆ ಎಂದು ಗೊತ್ತಾಯಿತು.

ಸಾಕ್ಷಿ ಶವ ಪಂಚನಾಮಯಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಪಂಚನಾಮೆಯನ್ನು ನಿಪಿ.14 ಎಂದು, ಸಾಕ್ಷಿಯ ಸಹಿಯನ್ನು ನಿಪಿ.14(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ.2 ರಿಂದ 7 ಫೋಟೋಗಳನ್ನು ನೋಡಿ , ಪಂಚನಾಮೆ ಕಾಲಕ್ಕೆ ತೆಗೆಸಿದ ಫೋಟೋಗಳು ಎಂದು ಗುರುತಿಸಿರುತ್ತಾರೆ.

<u>ಪಾಟೀಸವಾಲುಃ-</u> ಆರೋಪಿ ಪರ ಶ್ರೀ ಕೆ ಎನ್ ಆರ್ ವಕೀಲರಿಂದ.

ಶವ ಪಂಚನಾಮೆಯನ್ನು ಆರಿಫಾ ಶರಿಫ್ ಮತ್ತು ಮೆಹಬೂಬ್ ಶರಿಫ್ ಹೇಳಿ

ಬರೆಸಿದ್ದಾರೆ. ಆರಿಫಾ ಶರುಫ್ ರವರು ಫಾರುಕುಲ್ಲಾ ರವರ ಅಕ್ಕ ಎನ್ನುವುದು ಸರಿ. ಚಾಕುವಿನಿಂದ ತಿವಿದು ಕೊಲೆ ಮಾಡಿದ್ದಾರೆ ಎಂದು ನಿಪಿ.14 ರಲ್ಲಿ ಬರೆದ ವಿಚಾರ ನನಗೆ ಗೊತ್ತಿದೆ. ಸಾಕ್ಷಿಗೆ ಮನ್ಸೂರ್ ಎನ್ನುವವರು ಈ ಕೊಲೆಯಲ್ಲಿ ಭಾಗಿಯಾಗಿದ್ದಾರೆ ಎಂದು ನಿಮಗೆ ನಿಖರವಾಗಿ ಗೊತ್ತಿದೆಯೇ ಎಂದರೆ ಸಾಕ್ಷಿ ನಿಖರವಾಗಿ ಗೊತ್ತಿದೆ ಎಂದು ನುಡಿದಿದ್ದಾರೆ. ಪಂಚನಾಮೆಯಲ್ಲಿ ಯಾವುದೋ ಆಯುಧದಿಂದ ಗಾಯಗಳಾಗಿರುತ್ತವೆ ಎಂದು ಬರೆಸಿಲ್ಲ , ಚಾಕುವಿನಿಂದಲೇ ಎಂದು ಹೇಳಿ ಬರೆಸಿದ್ದೇವೆ. ಗಾಯಗಳು ಎಷ್ಟು ಆಳದಲ್ಲಿದ್ದವು ಎಂದು ನಮ್ಮ ಸಮಕ್ಷಮ ಪರೀಕ್ಷೆ ಮಾಡಿಲ್ಲ. ನಸ್ರೂಲ್ಲಾ ಯಾವ ಕಾರಣಕ್ಕೆ ಕೊಲೆಯಲ್ಲಿ ಭಾಗಿಯಾಗಿದ್ದ ಎಂದು ನಿಮಗೆ ಗೊತ್ತಿದೆಯೇ ಎಂದರೆ ಸಾಕ್ಷಿ ಗೊತ್ತಿದೆ ಎಂದು ನುಡಿದಿರುತ್ತಾರೆ. ಯಾವ ಕಾರಣಕ್ಕೆ ಕೊಲೆಯಾಗಿದೆ ಎನ್ನುವ ಎಲ್ಲಾ ವಿಚಾರವನ್ನು ಮಹಜರ್ ನಲ್ಲಿ ಬರೆಸಿದ್ದಾರೆ. ಫಾರುಕ್ ಉಲ್ಲಾನಬಾಯಿಯಿಂದ ಮಧ್ಯದ ಮತ್ತು ಗಾಂಜಾದ ವಾಸನೆ ಬರುತ್ತಿದ್ದದನ್ನು ನೀವು ಗಮನಿಸಿದ್ದೀರಾ ಎಂದರೆ- ಸಾಕ್ಷಿ ಫಾರುಕ್ ಉಲ್ಲಾ ಮಧ್ಯ ಮತ್ತು ಗಾಂಜಾ ಸೇವನೆಮಾಡುವುದಿಲ್ಲ ಎಂದು ನುಡಿದಿದ್ದಾರೆ. ಫಿರ್ಯಾದಿ ಮತ್ತು ಫಾರುಕ್ ನ ಸಂಬಂಧಿಗಳು ಹೇಳಿಕೊಟ್ಟ ರೀತಿ ನಾನು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಹಬೀದುಲ್ಲಾ ಹೇಳಿದ ವಿಷಯವನ್ನು ತಿಳಿದುಕೊಂಡು ಹೇಳತ್ತಿದ್ದೇನೆ ಎಂದು ನುಡಿದಿರುತ್ತಾರೆ. ಶವ ಪಂಚನಾಮೆ ಮಾಡುವ ಸಮಯದಲ್ಲಿ ಹಬೀದುಲ್ಲಾ ಇರಲಿಲ್ಲ. ಕೊಲೆಯಾದ ಮಾರನೇ ದಿನ ಹಬೀದುಲ್ಲಾ ತಿಳಿಸಿದ್ದಾರೆ. ನನಗೆಮೋಬೈಲ್ ಮೂಲಕ ತಿಳಿಸಿದ್ದಾರೆ. ನನ್ನ ಮೋಬೈಲ್ ನಂ.9880 840 919 ಆಗಿದೆ. ಈ ನಂಬರ್ ಗೆ ರಾತ್ರಿ 1-00 ಗಂಟೆಗೆ ಹಬೀದುಲ್ಲಾನ ಮೋಬೈಲ್ ನಿಂದ ಕರೆ ಬಂದಿರುತ್ತದೆ. ನಾನು ಪೊಲೀಸರ ಮುಂದೆ ಬೇರೆ ಹೇಳಿಕೆ ಕೊಟ್ಟಿಲ್ಲ. ಈ ಕೊಲೆ ಅಲ್ಲಿದ್ದ ಹರಿತ ವಾದ ಬಾಟಲ್ ಗಳಿಂದ ಚುಚ್ಚಿದ್ದರಿಂದ ಆಗಿರುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿದ್ದಾರೆ. ಸಾಕ್ಷಿಗೆ ಈ ಸಾವು ಮುಂದುವರೆದು ವಕೀಲರು ತಿಳಿಸಿರುತ್ತಾರೆ. ಸಾವು ಸಂಭವಿಸಿದ್ದನ್ನು ಹಬೀದುಲ್ಲಾ ರವರು ನಿಮಗೆ ಯಾವುದೇ ಕಾರಣಕ್ಕೂ ಹೇಳಿಲ್ಲ ,ನೀವು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸಾಕ್ಷಿ ನಾನು ಸುಳ್ಳು ಹೇಳುತ್ತಿಲ್ಲ ಎಂದು ನುಡಿದಿದ್ದಾರೆ.

ಫಾರುಕ್ ಉಲ್ಲಾ ಮಧ್ಯ ಮತ್ತು ಗಾಂಜಾದ ಅಮಲಿನಲ್ಲಿದ್ದಾಗ ಆತನನ್ನು ಹಬೀದುಲ್ಲಾ ಒಡೆದ ಗಾಜಿನ ಬಾಟಲ್ ಮೇಲೆ ತಳ್ಳಿದ್ದರಿಂದ ಈ ಸಾವು ಸಂಭವಿಸಿರುತ್ತದೆ ಎಂದರೆ ಸಾಕ್ಷಿ - ಆ ರೀತಿ ಹೇಳುವುದು ಸರಿಯಲ್ಲ ಎಂದು ನುಡಿದಿರುತ್ತಾರೆ.

ನಿಪಿ.14 ಪಂಚನಾಮಯಲ್ಲಿ ಬರೆದ ವಿಷಯಗಳು ನಿನಗೆ  ಗೊತ್ತಿಲ್ಲದಿದ್ದರೂ ಸಹ ಫಾರುಕುಲ್ಲಾನ ಸಂಬಂಧಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಾ ಎಂದರೆ ಸಾಕ್ಷಿ ಸುಳ್ಳುಸಾಕ್ಷಿ ಹೇಳುತ್ತಿಲ್ಲ ಎಂದು ನುಡಿದಿದ್ದಾರೆ.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.94/2023

PW- 03

CW- 10

ಪ್ರ. ಬೋ. ದಿನಾಂಕಃ 02-01-2024

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಖಲಂದರ್ ಅಲಿಯಾಸ್ ಜಮೀರ್ ಖಾನ್ |
| ತಂದೆ/ಗಂಡನ ಹೆಸರು | : | ಮುಜಿಬ್ |
| ವಯಸ್ಸು | : | 19 ವರ್ಷ |
| ಉದ್ಯೋಗ | : | ವೆಲ್ಡಿಂಗ್ ಕೆಲಸ |
| ವಾಸ | : | ಹೊನ್ನಾಳಿ |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ನನಗೆ ಮೃತ ಫಾರುಕ್ ಉಲ್ಲಾ ಗೊತ್ತು. ಚಾಸಾ-9, 11 ರಿಂದ 15 ನನಗೆ ಗೊತ್ತು.

ದಿ.16-03-2023 ರಂದು 2 ನೇ ಆರೋಪಿ ಮನ್ಸೂರ್ ನ ಬರ್ತ್ ಡೇ ಇತ್ತು. ನಮ್ಮೂರಿನ ತುಂಗಭದ್ರಾ ಹೊಳೆಯ ಬಳಿ ಸದರಿ ಬರ್ತ್ ಡೇ ಕಾರ್ಯಕ್ರಮಕ್ಕೆ 1 ನೇ ಆರೋಪಿ , ನಾನು, ತರಕಾರಿ ಖಲಂದರ್ , ಅಮ್ಮು ಖಲಂದರ್ , ಇರ್ಶಾದ್ , ಮುಬಾರಕ್ , ತನ್ವಿರ್ , ಸುಹೇಲ್ ರವರುಗಳು ಹೋಗಿದ್ದೇವು. ಆ ಸ್ಥಳದಲ್ಲಿ ಕೇಕ್ ಕಟ್ ಮಾಡಿ , ಚಿಕನ್ ಬಿರಿಯಾನಿ ಊಟ ತೆಗೆದುಕೊಂಡು ಬಂದಿದ್ದರು , ಊಟ ಮಾಡಿದ್ದೇವೆ. ಉಟ ಮಾಡುವ ಸಮಯದಲ್ಲಿ 1 ನೇ ಆರೋಪಿ ಹಾಡು ಕೇಳಲು ನನ್ನ ಮೋಬೈಲ್ ಪಡೆದಿದ್ದ. ರಾತ್ರಿ 10-30 ಗಂಟೆ ಸುಮಾರಿಗೆ ನಾನು ಮನೆಗೆ ಹೋಗಲು ನನ್ನ ಮೋಬೈಲನ್ನು 1 ನೇ ಆರೋಪಿ ಬಳಿ ಕೇಳಿದ್ದೇನೆ. ಅದಕ್ಕೆ ಅವನು ಬೆಳಿಗ್ಗೆ ಕೊಡುತ್ತೇನೆ ಎಂದು ಹೇಳಿದ , ನಾನು ಅವನಿಗೆ , ನನ್ನ ಮನೆಯಲ್ಲಿ ಬೈಯತ್ತಾರೆ , ಕೊಡು ಎಂದು ಕೇಳಿದೆ. ನಾನು ಆತನಿಗೆ ಬಹಳ ಬಾರಿ ನನ್ನ ಮೋಬೈಲ್ ಕೊಡು ಎಂದು ಕೇಳಿದೆ , ಆತ ಕೊಡಲಿಲ್ಲ. ನಂತರ ನಾನು ಮನೆಗೆ ಹೋಗಿದೆ. ನಾನು ಮನೆಗೆ ಹೋಗುವಷ್ಟರಲ್ಲಿ ನನ್ನ ಅಪ್ಪ ನನ್ನ ಮೋಬೈಲ್ ಗೆ ಕರೆ ಮಾಡಿದ್ದರು , ಅದನ್ನು 1 ನೇ ಆರೂಪಿ ಸ್ವೀಕರಿಸಿದ್ದು , ನನ್ನ ತಂದೆ ನನ್ನ ಮಗ ಎಲ್ಲಿ ಎಂದು ಕೇಳಿದಾಗ 1 ನೇ ಆರೋಪಿ - ಅವನು ಎಲ್ಲೋ ಹೋಗಿದ್ದಾನೆ ಎಂದು ತಿಳಿಸಿದ್ದಾನೆ. ನಾನು ಮನೆಗೆ ಬಂದಾಗ

ನನ್ನ ತಂದೆ ವಿಚಾರಿಸಿದ್ದು, ನಾನು ಈ ರೀತಿ ಬರ್ತ್ ಡೇ ಗೆ ಹೋಗಿದ್ದೆ , 1 ನೇ ಆರೋಪಿ ನನ್ನ ಮೊಬೈಲ್ ಪಡೆದು , ವಾಪಸ್ ಕೊಟ್ಟಿಲ್ಲ ಎಂದು ಹೇಳಿದೆ. ಆಗ ನನ್ನ ತಂದೆ ಮತ್ತೆ ನನ್ನ ಮೊಬೈಲ್ ಗೆ ಕರೆ ಮಾಡಿ , 1 ನೇ ಆರೋಪಿಗೆ ಯಾಕೆ ನನ್ನ ಮಗನ ಮೊಬೈಲ್ ತೆಗೆದುಕೊಂಡಿದ್ದಿಯಾ ಎಂದು ಕೇಳಿದರು. ಆಗ 1 ನೇ ಅರೋಪಿ ನನ್ನ ತಂದೆ ಗೆ ನೀನು ಯಾರು ಕೇಳಲು ಸೂಳೇ ಮಗನೆ ,ಬೋಳಿಮಗನೆ ಎಂದು ಬೈದು , ನಿನಗೆ ದಮ್ಮು ಇದ್ದರೆ ಬಂದು ತಗೆದುಕೊಂಡು ಹೋಗು ಎಂದು 1 ನೇ ಆರೋಪಿ ನನ್ನ ತಂದೆಗೆ ಹೇಳಿದ್ದಾನೆ.

ಆ ನಂತರ ನಾನು ಮತ್ತು ನನ್ನ ತಂದೆ 1 ನೇ ಆರೋಪಿ ಕಡೆಯಿಂದ ಮೊಬೈಲ್ ಪಡೆದುಕೊಂಡು ಬರಲು ಬಿ.ಎಸ್.ಎನ್.ಎಲ್ ಕಛೇರಿ ಬಳಿ ಹೊಗುತ್ತಿದ್ದಾಗ ಹಬಿದ್ ಮತ್ತು ಫಾರುಕ್ ಎನ್ನುವವರು ಇದ್ದರು. ಆಗ ನನ್ನ ತಂದೆ ಅವರಿಬ್ಬರಿಗೆ ನನ್ನ ಮಗನ ಮೊಬೈಲ್ ಫೋನ್ ಪಡೆದಿದ್ದಾರೆ , ವಾಪಸ್ ಕೊಡಿಸಿಕೊಡಿ ಎಂದು ಅವರಿಗೆ ಹೇಳಿದರು. ನಂತರ ನಾನು , ನನ್ನ ತಂದೆ ಸೇರಿ ಸದರಿ ಹಬಿದ್ ಹಾಗೂ ಪಾರುಕ್ ರವರನ್ನು ಜೊತೆಯಲ್ಲಿ ಕರೆದುಕೊಂಡು ನಾನು , ನನ್ನ ತಂದೆ ಒಂದು ಬೈಕಿನಲ್ಲಿ ಹೋಗುತ್ತಿದ್ದೇವು, ಹಬಿದ್ ಮತ್ತು ಫಾರುಕ್ ರವರು ಒಂದು ಬೈಕಿನಲ್ಲಿ ಹೋಗುತ್ತಿದ್ದರು. ಸದರಿ ರಸ್ತೆಯಲ್ಲಿ ಹೋಗುತ್ತಿದ್ದಾಗ ಸದರಿ ರಸ್ತೆ ಕಚ್ಚಾ ರಸ್ತೆಯಾಗಿದ್ದರಿಂದ ನಮ್ಮ ಬೈಕ್ ಪಂಚರ್ ಆಯಿತು. ಆಗ ಹಬಿದ್ ಮತ್ತು ಫಾರುಕ್ ರವರು ಮುಂದೆ ಹೋದರು, ಆ ನಂತರ ನಾನು, ನನ್ನ ತಂದೆ ಬೇರೆ ಗಾಡಿ ತರಿಸಿಕೊಂಡು ಬರ್ತ್ ಡೇ ಪಾರ್ಟಿ ಸ್ಥಳಕ್ಕೆ ಹೋದೆವು. ನಾವು ಆ ಸ್ಥಳಕ್ಕೆ ಹೋಗುವಷ್ಟರಲ್ಲಿ 1 ಮತ್ತು 2 ನೇ ಆರೋಪಿತರು ಅಲ್ಲಿ ಇದ್ದರು. ನಾವು ಹೋಗಿ ನೋಡುವಷ್ಟರಲ್ಲಿ ಫಾರುಕ್ ನ ಕೊಲೆಯಾಗಿತ್ತು. ಆತನಿಗೆ ಚಾಕು ಹಾಕಿ ಕೊಲೆ ಮಾಡಲಾಗಿತ್ತು. ಚಾಸಾ-9 ಹಬಿದ್ ಕೊಲೆಯಾಗಿದ್ದ ದೇಹವನ್ನು ನೋಡಿ ಅಳುತ್ತಿದ್ದ. ನನಗೆ ಮನ್ಸೂರ್ ಎನ್ನುವವನು ಮುಖಕ್ಕೆ ಹೊಡೆದು ಹೋದ ಎಂದು ಹಬಿದ್ ನನಗೆ ಹೇಳಿದ. ಫಾರುಕ್ ನ ಕುತ್ತಿಗೆಗೆ ಚಾಕು ಹಾಕಲಾಗಿತ್ತು. ನಾನು ಹೋಗಿ ನೋಡುವಷ್ಟರಲ್ಲಿ ಆತ ತೀರಿಕೊಡಿದ್ದ. ಸ್ಥಳದಲ್ಲಿ ಮನ್ಸೂರ್ ಮತ್ತು ಹೊಡೆದವರು ಯಾರು ಇರಲಿಲ್ಲ. ಹಬೀದ್ ಎನ್ನುವವನು ಅವರಿಬ್ಬರು ಹೊಡೆದು ಹೋಗಿದ್ದಾರೆ ಎಂದು ತಿಳಿಸಿದ.

ನನ್ನನ್ನು ನಂತರ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿದ್ದಾರೆ, ನಾನು ಠಾಣೆಯಲ್ಲಿ ನಡೆದ ವಿಚಾರವಾಗಿ ಹೇಳಿದ್ದೇನೆ. ನಾನು ಹೊನ್ನಾಳಿ ನ್ಯಾಯಾಲಯಕ್ಕೆ ಹೋಗಿ ನಡೆದ ಘಟನೆಯ ಬಗ್ಗೆ ಹೇಳಿಕೆ ನೀಡಿರುತ್ತೇನೆ.

ಸಾಕ್ಷಿ ತಾನು ನ್ಯಾಯಾಲಯದ ಮುಂದೆ ನೀಡಿದ ಹೇಳಿಕೆಯಲ್ಲಿನ ತನ್ನ ಸಹಿನೋಡಿ ಗುರುತಿಸಿದ್ದು , ಹೇಳಿಕೆಯನ್ನು ನಿಪಿ.12 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.12(ಎ) ಎಂದು ಗುರುತಿಸಲಾಯಿತು.

ಸಾಕ್ಷಿ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ 2 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ನುಡಿದಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ-</u> ಮಾನ್ಯ ಸರ್ಕಾರಿ ಅಭಿಯೋಜಕರವರಿಂದ.

ನನ್ನ ತಂದೆ ಚಾಸಾ-9 ಹಬಿದುಲ್ಲಾ ಮತ್ತು ಮೃತ ಫಾರುಕ್ ಉಲ್ಲಾರಿಗೆ ನೀವೇ ನನ್ನ ಮಗನನ್ನು ಕರೆದುಕೊಂಡು ಸ್ಥಳಕ್ಕೆ ಹೋಗಿ ವಿಚಾರಿಸಿಕೊಂಡು ಬನ್ನಿ ಎಂದು ಹೇಳಿದ್ದಾರೆ ಎಂದರೆ ಸಾಕ್ಷಿ - ನನ್ನ ಅಪ್ಪನೂ ಸಹ ಜೊತೆಯಲ್ಲಿ ಬಂದಿದ್ದಾರೆ ಎಂದು ನುಡಿದಿದ್ದಾರೆ. ಆ ನಂತರ ನಾನು ಸದರಿ ಹಬಿದುಲ್ಲಾ ಮತ್ತು ಫಾರುಕ್ ರವರನ್ನು ಸ್ಥಳಕ್ಕೆ ಕರೆದುಕೊಂಡು ಹೋದೆ ಎಂದರೆ ಸಾಕ್ಷಿ - ಇಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಗೆ - ನೀನು ಆಸ್ಥಳಕ್ಕೆ ಕರೆದುಕೊಂಡು ಹೋಗಿ ನನ್ನ ಮೋಬೈಲ್ ನ್ನು ಕೊಡಿ ಎಂದು ಹಬಿದುಲ್ಲಾ ಕೇಳಿದ , ಆಗ ಆರೋಪಿತರಿಬ್ಬರೂ ಅವಾಚ್ಯ ಶಬ್ದಗಳಿಂದ ಬೈದರು, ಆ ಗ ಮೃತ ಫಾರುಕ್ ಉಲ್ಲಾ ಯಾಕೆ ಬೈಯುತ್ತೀರಾ ಎಂದು ಕೇಳಿದಾಗ - ನಸರುಲ್ಲಾ ಚಾಕುವಿನಿಂದ ಫಾರುಕ್ ಉಲ್ಲಾನ ಎಡ ಕುತ್ತಿಗೆಗೆ ಚುಚ್ಚಿದ , ಬಿಡಿಸಲು ಹೋದ ಹಬಿದುಲ್ಲಾಗೆ ಮನ್ಸೂರ್ ಮುಷ್ಟಿ ಮಾಡಿ ಮುಖಕ್ಕೆ ಎದೆಗೆ ಗುದ್ದಿದ, ಮನ್ಸೂರ್ ಸಹ ಚಾಕುವಿನಿಂದ ಫಾರುಕ್ ಉಲ್ಲಾನ ಬಲಭಾಗದ ಹಿಂಭಾಗಕ್ಕೆ ಚುಚ್ಚಿದ , ಆಗ ಫಾರುಕ್ ಉಲ್ಲಾ ಸ್ಥಳದಲ್ಲಿ ತೀವ್ರ ರಕ್ತಸ್ರಾವವಾಗಿ ಮೃತಪಟ್ಟ - ಎಂದರೆ ಸಾಕ್ಷಿ- ನಾನು ಆ ಸಮಯದಲ್ಲಿ ಇರಲಿಲ್ಲ ಎಂದು ನುಡಿದಿದ್ದಾರೆ. ಆಗ ಆತ ಮೃತಪಟ್ಟಾಗ ಆರೋಪಿತರಿಬ್ಬರೂ ಓಡಿ ಹೋದರು ಎಂದರೆ ಸಾಕ್ಷಿ - ನಾನು ಆಗ ಸ್ಥಳದಲ್ಲಿ ಇರಲಿಲ್ಲ ಎಂದು ನುಡಿದಿರುತ್ತಾರೆ. ನಾನೇ ಖುದ್ದಾಗಿ ನೋಡಿದ್ದೇನೆ , ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ಈಗ ಓದಿ ಹೇಳಿದಂತೆ ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ.13 ಎಂದು ಗುರುತಿಸಲಾಯಿತು. ಇದೇ ವಿಚಾರವನ್ನು ನ್ಯಾಯಾಲಯದಲ್ಲಿ

ಹೇಳಿದ್ದಿಯಾ ಎಂದರೆ , ಠಾಣೆಯಲ್ಲಿ ಇದೇ ರೀತಿ ಹೇಳಬೇಕು ಎಂದು ಹೇಳಿದ್ದರು , ಆದರೆ ನಾನು ಅಲ್ಲಿ ಇದ್ದಿರಲಿಲ್ಲ, ಅದರಂತೆ ನಾನು ಕೊರ್ಟಿನಲ್ಲಿ ಹೇಳಿದ್ದೇನೆ. ನಡೆದ ವಿಚಾರವನ್ನು ಕೊರ್ಟಿನಲ್ಲಿ ಹೇಳಿದ್ದರೂ ಸಹ ಈಗ ಇಲ್ಲ ಎಂದು ಸುಳ್ಳು ಹೇಳುತ್ತಿದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ.12(ಬಿ) ಎಂದು ಗುರುತಿಸಲಾಯಿತು.

<u>ಪಾಟೀಸವಾಲು:-</u> ಆರೋಪಿ ಪರ ಶ್ರೀ ಕೆ ಎನ್ ಆರ್ ವಕೀಲರಿಂದ.

ಸುಮಾರು 12 ಜನ ಬರ್ತ್ ಡೇ ಪಾರ್ಟಿಯಲ್ಲಿ ಸೇರಿದ್ದೇವು. ನಾವು ಹೋದ ಸ್ಥಳ ನಿರ್ಜನ ಪ್ರದೇಶದ ಎನ್ನುವುದು ಸರಿ. ತುಂಬಭದ್ರಾ ಹೊಳೆಯ ಹತ್ತಿರದ ಹೊಂಗೆ ಮರದಿಂದ ಎಷ್ಟು ದೂರದಲ್ಲಿದೆ ಎಂದರೆ ಸಾಕ್ಷಿ - ಸುಮಾರು 50 ಅಡಿ ದೂರದಲ್ಲಿದೆ ಎಂದು ನುಡಿದಿದ್ದಾರೆ. ನದಿ ಉಕ್ಕಿಬಂದರೆ ಅಲ್ಲಿಯವರೆಗೆ ನೀರು ಬರುತ್ತದೆ ಎಂದರೆ ಸಾಕ್ಷಿ - ಹೌದು ಎಂದು ನುಡಿದಿದ್ದಾರೆ. ಸದರಿ ಪ್ರದೇಶಕ್ಕೆ ಮಧ್ಯಕುಡಿಯಲು, ಹಾಗೆ ಹೀಗೆ ಬರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿದಿದ್ದಾರೆ. ಕುಡಿದ ಬಾಟಲ್ ಗಳನ್ನು ಅಲ್ಲೇ ಎಸೆದಿರುತ್ತಾರೆ ಎಂದರೆ ಸಾಕ್ಷಿ - ಹೌದು ಎಂದು ನುಡಿದಿರುತ್ತಾರೆ. ಆ ಸ್ಥಳದಲ್ಲಿ ಅನೇಕ ಬಾಟಲ್ ಗಳು ಒಡೆದಿರುತ್ತವೆ, ಅನೇಕ ಬಾಟಲ್ ಗಳು ಸರಿ ಇರುತ್ತವೆ ಎಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ.

ನೀವು 2 ನೇ ಬಾರಿ ಸ್ಥಳಕ್ಕೆ ಹೋದಾಗ ಸಮಯ ಎಷ್ಟು ಗಂಟೆಯಾಗಿತ್ತು ಎಂದರೆ ಸಾಕ್ಷಿ ರಾತ್ರಿ 12-00, 12-30 ಗಂಟೆಯಾಗಿರಬಹುದು ಎಂದು ನುಡಿದಿರುತ್ತಾರೆ. ಪಾರ್ಟಿಗಾಗಿ ಏನು ಅಡುಗೆ ಮಾಡಿದ್ದೀರಿ , ಏನು ತಂದಿದ್ದರಿ ಎಂದರೆ ಸಾಕ್ಷಿ - ಅಡುಗೆ ಮಾಡಿರಲಿಲ್ಲ , ಕೇಕ್ ಮತ್ತು ಚಿಕನ್ ಬಿರಿಯಾನಿ ತಂದಿದ್ದರು ಎಂದು ನುಡಿದಿರುತ್ತಾರೆ.

ಆರೋಪಿಪರ ವಕೀಲರು ಈ ದಿನ ವಕಾಲತ್ತು ಸಲ್ಲಿಸಿದ್ದೇನೆ ಎಂದು ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೇಳಿರುತ್ತಾರೆ. ಪಾಟೀಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

ಪಿಡಬ್ಲ್ಯೂ-3

ಸಾಕ್ಷಿಯನ್ನು ಇಂದು ದಿ.03-01-2024 ರಂದು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀಸವಾಲುಃ- ಆರೋಪಿ ಪರ ಶ್ರೀ ಕೆ ಎನ್ ಆರ್ ವಕೀಲರಿಂದ.

ಚಾಸಾ-9 ಹಬೀದ್ ಮತ್ತು ಮೃತ ಫಾರುಕ್ ಉಲ್ಲಾ ಹೋಲ್ ಸೇಲ್ ಹಣ್ಣಿನ ವ್ಯಾಪಾರ ಮಾಡುತ್ತಿದ್ದರು ಎನ್ನುವುದು ಸರಿ. ಅವರು ಸುಮಾರು ಮೂರ್ನಾಲ್ಕು ವರ್ಷಗಳಿಂದ ಆ ರೀತಿ ಹಣ್ಣಿನ ವ್ಯಾಪಾರ ಮಾಡುತ್ತಿದ್ದಿರಬಹುದು. ಮೃತ ಫಾರುಕ್ ಉಲ್ಲಾ ನಮ್ಮ ಸಂಬಂಧಿ , ಚಾಸಾ-9 ಹಬಿದ್ ನಾನು ಚಿಕ್ಕವನಿದ್ದಾಗಿನಿಂದಲೂ ಪರಿಚಯ. ಅವರಿಬ್ಬರ ವ್ಯವಹಾರವನ್ನು ನಾನು ಹತ್ತಿರದಿಂದಲೇ ನೋಡಿದ್ದೇನೆ ಎನ್ನುವುದು ಸರಿ. ಒಂದು ತಿಂಗಳಿಗೆ ಅಬುದುಲ್ಲಾ ಮತ್ತು ಮೃತ ಫಾರುಕ್ ಉಲ್ಲಾ ಸುಮಾರು ಒಂದು ಲಕ್ಷದ ವರೆಗೆ ಸಂಪಾದನೆ ಮಾಡುತ್ತಿದ್ದರು. ಅವರಿಗೆ ಸುಮಾರು ನಲವತ್ತರಿಂದ ಐವತ್ತು ಸಾವಿರ ಲಾಭ ಬರುತ್ತಿತ್ತು. ಹಭಿದ್ ಮತ್ತು ಫಾರುಕ್ ಉಲ್ಲಾ ಮಧ್ಯ ಲಾಭದ ವಿಚಾರವಾಗಿ ಜಗಳ ಆಗುತ್ತಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಇತ್ತೀಚೆಗೆ ಸದರಿ ಹಬಿದ್ ಮತ್ತು ಫಾರುಕ್ ಉಲ್ಲಾ ಹಣ್ಣಿನ ವ್ಯಾಪಾರವನ್ನು ಪ್ರತ್ಯೇಕವಾಗಿ ಮಾಡುತ್ತಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಇತ್ತೀಚಿನ ದಿನಗಳಲ್ಲಿ ಅವರಿಬ್ಬರ ಸಂಬಂಧ ಸರಿಯಿರಲಿಲ್ಲ ಎನ್ನುವುದು ಸರಿಯಲ್ಲ.

1 ನೇ ಆರೋಪಿ ನಿಮ್ಮ ಬಳಿ ಎಷ್ಟು ಗಂಟೆಗೆ ಫೋನ್ ಕರಸಿದುಕೊಂಡಿದ್ದ ಎಂದರೆ ಸಾಕ್ಷಿ ಸುಮಾರು 10-30 ಗಂಟೆಗೆ ಪಡೆದಿದ್ದ ಎಂದು ನುಡಿದಿರುತ್ತಾರೆ. ದಿ.16-03-2023 ರಂದು 1 ನೇ ಆರೋಪಿ ನನ್ನಿಂದ ಫೋನನ್ನು ಪಡೆದುಕೊಂಡಿದ್ದ. ನಾನು ಪೊಲೀಸರ ಮುಂದೆ ದಿ.16-03-2023 ರಂದು 1 ನೇ ಆರೋಪಿ ನನ್ನಿಂದ ಫೋನ್ ಪಡೆದುಕೊಂಡಿದ್ದ ಎಂದು ಹೇಳಿದ್ದೇನೆ. ಸಾಕ್ಷಿಗೆ ಸದರಿ ದಿನದಂದು ರಾತ್ರಿ 8-00 ಗಂಟೆಗೆ ಕೇಕ್ ತಂದಿದ್ದೀರಾ ಎಂದರೆ ಸಾಕ್ಷಿ ನಾವು ಅಲ್ಲಿಗೆ ಹೋದಾಗ 8-00 ಗಂಟೆಯಾಗಿತ್ತು , 8-30 ಕ್ಕೆ ಕೇಕ್ ತಂದಿದ್ದಾರೆ ಎಂದು ನುಡಿದಿರುತ್ತಾರೆ. ಕೇಕ್ ತರಲು ನಾನು ಹೋಗಿರಲಿಲ್ಲ. ಸರ್ಕಾರಿ ಆಸ್ಪತ್ರೆಯ ಎದುರುಗಡೆ ಇದ್ದ ಬೇಕರಿಯಿಂದ ಕೇಕನ್ನು ತಂದಿದ್ದಾರೆ. ಸದರಿಕೇಕ್ ನಾರ್ಮಲ್ ಕೇಕ್ ಆಗಿತ್ತು. ಇದೇ ಅಂಗಡಿಯಿಂದ ಕೇಕ್ ತಂದರು ಎಂದು ಪೊಲೀಸರ ಮುಂದೆ ಹೇಳಲು ನಿಮಗೆ ತೊಂದರೆ ಇತ್ತಾ ಎಂದರೆ ಸಾಕ್ಷಿ ತೊಂದರೆ ಇರಲಿಲ್ಲ ಎಂದು ನುಡಿದಿರುತ್ತಾರೆ. ಕೇಕ್ ಕಟ್ ಮಾಡಿದಾಗ ರಾತ್ರಿ ಸುಮಾರು 9-30 ಗಂಟೆಯಾಗಿತ್ತು. ಕೇಕ್ ಕಟ್ಟ ಮಾಡಲು

ಬೇಕರಿಯವರು ಕೊಟ್ಟ ಪ್ಲಾಸ್ಟಿಕ್ ಚಾಕುವನ್ನು ಕೇಕ್ ಕಟ್ಟ ಮಾಡಲು ಉಪಯೋಗಿಸಿದ್ದಾರೆ. ಆ ಸ್ಥಳದಲ್ಲಿ ಆ ದಿನ ಆ ಸಮಯದಲ್ಲಿ ಯಾರ ಬಳಿಯೂ ಚಾಕು ಇರಲಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲಎಂದು ನುಡಿದಿರುತ್ತಾರೆ.

ಸದರಿ ಸ್ಥಳದ ಹೊಂಗೆ ಮರದಿಂದ ಹೊನ್ನಾಳಿ ಎಷ್ಟು ಕಿಮೀ ದೂರದಲ್ಲಿದೆ ಎಂದರೆ ಸಾಕ್ಷಿ 2 ಕಿಮೀ ದೂರದಲ್ಲಿದೆ ಎಂದು ನುಡಿದಿರುತ್ತಾರೆ. ಅದರಂತೆ ಗೊಲ್ಲರಹಳ್ಳಿ ಸದರಿ ಹೊಂಗೆ ಮರದಿಂದ ಎಷ್ಟು ಕಿಮೀ ದೂರದಲ್ಲಿದೆ ಎಂದರೆ ಸಾಕ್ಷಿ ಸುಮಾರು ಒಂದರಿಂದ ಎರಡು ಕಿಮೀ ದೂರದಲ್ಲಿಇರಬಹುದು ಎಂದು ನುಡಿದಿರುತ್ತಾರೆ. ಆ ಸ್ಥಳದಲ್ಲಿ ಯಾವುದೇ ಬೆಳಕಿನ ವ್ಯವಸ್ಥೆಯನ್ನು ಹೊನ್ನಾಳಿ ಟೌನ್ ಮುನ್ಸಿಪಲ್ ನವರು ಮಾಡಿಲ್ಲ ಅಥವಾ ಗೊಲ್ಲರಹಳ್ಳಿ ಗ್ರಾಮಪಂಚಾಯಿತಿಯವರು ಸಹ ಮಾಡಿಲ್ಲ ಎಂದರೆ ಸಾಕ್ಷಿ ಮಾಡಿಲ್ಲ ಎಂದು ನುಡಿದಿರುತ್ತಾರೆ. ನಿಮ ಫೋನನ್ನು 1 ನೇ ಆರೋಪಿ ಪಡೆದ ನಂತರ ಯಾರಾದರೂ ಫೋನ್ ಕರೆ ಮಾಡಲು ಆ ಫೋನ್ ಬಳಸಿದ್ದಾರಾ ಎಂದರೆ ಸಾಕ್ಷಿ ಬಳಸಿಲ್ಲ ಎಂದು ನುಡಿದಿರುತ್ತಾರೆ. ದಿ.16-03-2023 ರಂದು 1 ನೇ ಆರೋಪಿ ನಿಮ್ಮ ಫೋನನ್ನು ಹಾಡು ಕೇಳಲು ಮಾತ್ರ ಪಡೆದಿದ್ದರಾ ಎಂದರೆ ಸಾಕ್ಷಿ ಹೌದು ಹಾಡು ಕೇಳಿಲು ಪಡೆದಿದ್ದರು ಎಂದು ನುಡಿದಿರುತ್ತಾರೆ.

ಆ ದಿನ ಬರ್ತ ಡೇ ಪಾರ್ಟಿಗಾಗಿ ಎಷ್ಟು ಫುಲ್ ಬಾಟಲ್ ಗಳನ್ನು ತೆಗೆದುಕೊಂಡು ಬಂದ್ದಿದ್ದೀರಿ ಎಂದರೆ ಸಾಕ್ಷಿ ಮೂರು ಫುಲ್ ಬಾಟಲ್ ಗಳನ್ನು ಎಂದು ನುಡಿದಿರುತ್ತಾರೆ. ಫುಲ್ ಬಾಟಲ್ ಬಿಟ್ಟು ಬೀಯರ್ ಬಾಟಲ್ ಎಷ್ಟು ತಂದಿದ್ದೀರಿ ಎಂದರೆ ಸಾಕ್ಷಿ ಮೂರೇ ಬಾಟಲ್ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ನಿಮ್ಮ ಪ್ರಕಾರ ಮೂರು ಫುಲ್ ಬಾಟಲ್ ಗಳು ರಮ್ ಆಗಿತ್ತಾ , ವಿಸ್ಕಿ ಆಗಿತ್ತಾ ಅಥವಾ ಎರಡೂ ಆಗಿದ್ದವಾ ಎಂದರೆ ಸಾಕ್ಷಿ - ಸೋಡಾ ಮಿಕ್ಸ ಮಾಡುವ ಎಣ್ಣೆ ಆಗಿತ್ತು ಎಂದು ನುಡಿದಿರುತ್ತಾರೆ. ಆ ದಿನ ಎಲ್ಲರೂ ಸೇರಿ ಸೋಡಾ ಮಿಕ್ಸ ಮಾಡಿ ಕುಡಿದಿದ್ದರಾ ಎಂದರೆ ಸಾಕ್ಷಿ - ನಾಲ್ಕು ಜನ ಮಾತ್ರ ಕುಡಿದಿದ್ದರು , ಅವರುಗಳೆಂದರೆ ನಸರುಲ್ಲಾ ,ತನ್ವಿರ್ ಮನ್ಸೂರ್ ಮತ್ತು ಮುಬರಕ್ ಎನ್ನುವವರು ಕುಡಿದಿರುತ್ತಾರೆ. ನಾಲ್ಕೂ ಜನರು ಸೇರಿ ದೇಹವನ್ನು ಹತೋಟಿಗೆ ಬರದ ಮಟ್ಟದಲ್ಲಿ ಕುಡಿದಿದ್ದಾರಾ ಎಂದರೆ ಸಾಕ್ಷಿ - ಟೈಮ್ ಕೊಟ್ಟು ಕುಡಿದಿದ್ದರು , ದೇಹ ಹತೋಟಿಯಲ್ಲಿತ್ತು ಎಂದು ನುಡಿದಿದ್ದಾರೆ. ಕುಡಿದ ನಾಲ್ಕೂ ಜನರಲ್ಲಿ ಯಾರು ಸ್ಟಡಿಯಾಗಿದ್ದರು ಎಂದರೆ ಸಾಕ್ಷಿ - ಅದು ನನಗೆ ಹೇಳಲು

ಆಗುವುದಿಲ್ಲ ಎಂದು ನುಡಿದಿರುತ್ತಾರೆ. ಆ ದಿನ ಎಲ್ಲರ ಬಳಿ ಮೋಬೈಲ್ ಫೋನ್ ಗಳು ಇದ್ದವಾ ಎಂದರೆ ಸಾಕ್ಷಿ - 1 ನೇ ಆರೋಪಿ ಬಳಿ ಸಣ್ಣದು ಕೀಪ್ಯಾಡ್ ಮೋಬೈಲ್ ಇತ್ತು , ಹಾಡು ಕೇಳುವ ಮೋಬೈಲ್ ಇರಲಿಲ್ಲ ಎಂದು ನುಡಿದಿರುತ್ತಾರೆ. ಉಳಿದವರ ಬಳಿ ಸ್ಮಾರ್ಟ್ ಫೋನ್ ಗಳು ಇದ್ದವು. ಸದರಿ ಪಾರ್ಟಿಯಲ್ಲಿ ಫೋಟೋಗಳನ್ನು ಮತ್ತು ವಿಡಿಯೋಗಳನ್ನು ಅವರವರ ಮೋಬೈಲ್ ಗಳಲ್ಲಿ ತೆಗೆದಿರಬಹುದು. ನಿಮಗೆ ಗೊತ್ತಿರುವ ರೀತಿ ಯಾರ ಯಾರ ಮೋಬೈಲ್ಗಳಲ್ಲಿ ಫೋಟೋ ತೆಗೆದಿದ್ದಾರೆ ಎಂದರೆ ಸಾಕ್ಷಿ ನಾನ ಅಷ್ಟಾಗಿ ಗಮನಿಸಿಲ್ಲ ಎಂದು ನುಡಿದಿರುತ್ತಾರೆ. ಫೋಟೋಗಳನ್ನು ಮತ್ತು ವಿಡಿಯೋಗಳನ್ನು ತೆಗೆದಿದ್ದೇವೇ ಎಂದು ಪೊಲೀಸರ ಮುಂದೆ ಹೇಳಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಆ ವಿಷಯವನ್ನು ಪೊಲೀಸರಿಗೆ ಹೇಳಲು ನಿಮಗೆ ಏನಾದರೂ ಆತಂಕ ಇತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಹಬಿದ್ ಮತ್ತು ಫಾರುಕ್ ಉಲ್ಲಾ ರವರನ್ನು ನೀವು ಬಿ ಎಸ್ ಎನ್ ಎಲ್ ಆಫೀಸ್ ಬಳಿ ನೋಡಿದಾಗ ಅವರ ಬಳಿ ಮೋಬೈಲ್ ಫೋನ್ ಇತ್ತಾ ಎಂದರೆ ಸಾಕ್ಷಿ ಇತ್ತು ಎಂದು ನುಡಿದರುತ್ತಾರೆ. ಬಿ ಎಸ್ ಎನ್ ಎಲ್ ಕಛೇರಿ ಬಳಿ ನೀನು ಮತ್ತು ನಿನ್ನ ತಂದೆ ಹಬೀದ್ ಮತ್ತು ಫಾರುಕ್ ಉಲ್ಲಾ ರವರನ್ನು ಭೇಟ್ಟಿಯಾದಾಗ ಏನು ನಡೆಯಿತು ಎಂದು ಪ್ರಶ್ನಿಸಲಾಗಿ - ನನ್ನ ಅಪ್ಪ , ನನ್ನ ಮಗನ ಮೋಬೈಲ್ ತೆಗೆದುಕೊಂಡಿದ್ದಾರೆ , ಹೆಂಗ ಬಂದರೆ ಹಂಗೆ ಬೈದಿದ್ದಾರೆ, ಸ್ವಲ್ಪಪಡೆದುಕೊಂಡು ಕೊಡಿ ಎಂದು ಹಬಿದ್ ಗೆ ಹೇಳಿದರು ಎಂದು ನುಡಿದಿರುತ್ತಾರೆ. ಸಾಕ್ಷಿಗೆ ನ್ಯಾಯಾಲಯವು ಮುಂದೆ ಏನಾಯಿತು ಎಂದು ಪ್ರಶ್ನಿಸಲಾಗಿ - ಅಲ್ಲಿಂದ ನಾನು , ಹಬೀದ್ ಮತ್ತು ಫಾರುಕ್ ಮೂರು ಜನ ಹೊಳೆಯ ಬಳಿ ಹೋದೆವು , ಆಗ ಹಬಿದ್ ನಸರುಲ್ಲಾನನ್ನು ಮೋಬೈಲ್ ಕೇಳಿದರು , ಆತನ ಮೋಬೈಲನ್ನು ಯಾಕೆ ಪಡೆದುಕೊಂಡಿದ್ದೀರಾ , ಕೊಡಿ ಎಂದು ಕೇಳಿದರು , ಆಗ ನಸರುಲ್ಲಾ ಹಬಿದ್ ಗೆ ಬೋಳಿಮಕ್ಕಳಾ , ಸೂಳೇಮಕ್ಕಳಾ , ನೀವು ಯಾರು ಕೇಳಲು ಎಂದು ಬೈದ. ಅದಕ್ಕೆ ಫಾರುಕ್ ಯಾಕೆ ಬೈಯುತ್ತೀಯಾ, ಮೋಬೈಲ್ ಕೊಡಿ ಎಂದು ಹೇಳಿದರು , ಆಗ ನಸರುಲ್ಲಾ ನಿಮ್ಮಿಬ್ಬರನ್ನು ಬಿಡುವುದಿಲ್ಲ ಎಂದು ಫಾರುಕ್ ಗೆ ಚಾಕು ಹಾಕಿದ , ಆಗ ಬಿಡಿಸಲು ಹೋದಾಗ ಮನಸುರ್ ಹಬಿದ್ ಗೆ ಮುಖಕ್ಕೆ ಹೊಡೆದಿದ್ದಾನೆ. ಆಗ ಮನ್ಸೂರ್ ಚಾಕುವನ್ನು ಫಾರುಕ್ ನ ಬೆನ್ನಿಗೆ ಹಾಕಿದ್ದಾನೆ. ಫಾರುಕ್ ಅಲ್ಲೆ ಸ್ಥಳದಲ್ಲಿ ರಕ್ತಸ್ರಾವವಾಗಿ ಸಾವನ್ನಪ್ಪಿದ. ಸ್ಥಳದಿಂದ ಆರೋಪಿ ಮನ್ಸೂರ್ ಮತ್ತು ನಸರುಲ್ಲಾ ಸ್ಥಳದಿಂದ ಓಡಿ ಹೋದರು.

ಸಾಕ್ಷಿಗೆ ನ್ಯಾಯಾಲಯವು ನಿನ್ನೆಯ ದಿನ ವೆಹಿಕಲ್ ಪಂಚರ್ ಆಗಿ ನಾವು ಸ್ಥಳಕ್ಕೆ ಹೋಗಲಿಲ್ಲ ಎಂದು ಹೇಳಿದೆ ಎಂದು ಪ್ರಶ್ನಿಸಲಾಗಿ - ನನಗೆ ಮನ್ಸೂರ್ ನಿಂದ ಟಾರ್ಚರ್ ಇತ್ತು , ನನ್ನ ಅಂಗಡಿ ಬಳಿ ಬಂದು ನನಗೆ ಎರಡು ಮೂರು ಬಾರಿ ಹೆದರಿಕೆ ಹಾಕಿದ್ದ , ಅದರಿಂದ ಹೆದರಿ ಆ ರೀತಿ ಹೇಳಿರುತ್ತೇನೆ.

ಆರೋಪಿ ಮನ್ಸೂರ್ ನಮ ಅಂಗಡಿ ಬಳಿ ಬಂದು ನನಗೆ ಎರಡು ಮೂರು ಬಾರಿ ಟಾರ್ಚರ್ ನೀಡಿದ್ದಾನೆ ಎಂದು ಪೊಲೀಸರ ಮುಂದೆ ದೂರು ನೀಡಿದ್ದೀರಾ ಎಂದರೆ ಸಾಕ್ಷಿ ದೂರು ನೀಡಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ಯಾವ ಕಾರಣಕ್ಕೆ ದೂರು ನೀಡಲಿಲ್ಲ ಎಂದು ನ್ಯಾಯಾಲಯ ಪ್ರಶ್ನಿಸಲಾಗಿ ಸಾಕ್ಷಿ - ಆ ವಿಷಯವನ್ನು ನಾನು ನಮ್ಮ ಮನೆಯವರಿಗೆ ತಿಳಿಸಿದ್ದೇನೆ , ಅದರಿಂದ ಹೆದರಿ ನಾನು ಈಗ ದಾವಣಗೆರೆಯಲ್ಲಿ ವಾಸ ಮಾಡುತ್ತಿದ್ದೇನೆ ಎಂದು ನುಡಿದಿರುತ್ತಾರೆ. ನಿಮ್ಮ ಮನೆಯವರು ಈ ಬಗ್ಗೆ ದೂರು ನೀಡಿದ್ದಾರಾ ಎಂದರೆ ಸಾಕ್ಷಿ ನೀಡಿಲ್ಲ ಎಂದು ನುಡಿದಿರುತ್ತಾರೆ. ದಾವಣಗೆರೆಯಲ್ಲಿ ವಾಸ ಮಾಡುವ ಮನೆಯ ಮಾಲೀಕರ ಹೆಸರೇನು ಎಂದರೆ ಸಾಕ್ಷಿ - ನಾನು ನಮ್ಮ ಸಂಬಂಧಿಕರ ಮನೆಯಲ್ಲಿ ವಾಸ ಮಾಡುತ್ತಿದ್ದೇನೆ ಎಂದು ನುಡಿದಿರುತ್ತಾರೆ.

ಚಾಸಾ-19 ನನ್ನ ತಂದೆ. ನನ್ನ ತಂದೆ ನನ್ನ ಜೊತೆ ನ್ಯಾಯಾಲಯಕ್ಕೆ ಬಂದಿದ್ದರು ಎನ್ನುವುದು ಸರಿ. ಈ ದಿನ ಸಹ ನಿನ್ನ ತಂದೆ ಬಂದಿದ್ದಾರೆ ಎಂದರೆ ಸಾಕ್ಷಿ ಬಂದಿದ್ದಾರೆ ಎಂದು ನುಡಿದಿದ್ದಾರೆ.

ದಿ.16-03-2023 ರಂದು ಹೊಯ್ಸಳ ಪೊಲೀಸರಿಗೆ ಪಾರ್ಟಿ ನಡೆಯುತ್ತದೆ ಎಂದು ನೀವು ತಿಳಿಸಿದ್ದರಾ ಎಂದರೆ ಸಾಕ್ಷಿ ತಿಳಿಸಿಲ್ಲ ಎಂದು ನುಡಿದಿರುತ್ತಾರೆ.

ಸಾಕ್ಷಿಗೆ ದಿ.17-03-2023 ರಂದು ರಾತ್ರಿ 12-30 ಗಂಟೆ ಸುಮಾರಿಗೆ ನಿವು ಸ್ಥಳಕ್ಕೆ ಹೋದಾಗ ಸ್ಥಳದಲ್ಲಿ ಕತ್ತಲಲ್ಲಿ ಹೇಗೆ ನೋಡಿದ್ದೀರಾ ಎಂದರೆ ಸಾಕ್ಷಿ - ನಾವು ಬೈಕಿನ ಬೆಳಕಿನ ಸಹಾಯದಿಂದ ನೋಡಿದ್ದೇವೆ ಎಂದು ನುಡಿದಿದ್ದಾರೆ. ಬೈಕಿನ ಬೆಳಕಿನ ಸಹಾಯದಿಂದ ನೀವು ಏನು ನೋಡಿದ್ದೀರಾ ಎಂದರೆ ಸಾಕ್ಷಿ - ನಸರುಲ್ಲಾ ಮತ್ತು ಮನ್ಸೂರ್ ರವರು ಸೇರಿ ಫಾರುಕ್ ಮತ್ತು ಹಬಿದ್ ಗೆ ಹೊಡೆದಿದ್ದದ್ದನ್ನು ನೋಡಿದ್ದೇನೆ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ನಸರುಲ್ಲಾ ಮತ್ತು ಮನ್ಸೂರ್ ರವರು ಚಾಕು ಹಾಕಿದ್ದನ್ನು ಬೈಕಿನ ಬೆಳಕಿನಿಂದ

ನೋಡಿದ್ದೇನೆ ಎಂದು ಪೊಲೀಸರ ಮುಂದೆ ಹೇಳಿದ್ದೀರಾ ಎಂದರೆ ಸಾಕ್ಷಿ ಹೇಳಿದ್ದೇನೆ ಎಂದು ನುಡಿದಿರುತ್ತಾರೆ. ಆ ರೀತಿ ಸೃಷ್ಟಿಸಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆ ರೀತಿ ನಾನು ಪೊಲೀಸರ ಮುಂದೆ ಹೇಳಿಲ್ಲ ಎನ್ನುವುದು ಸರಿಯಲ್ಲ. ಬೈಕಿನ ಬೆಳಕಿನಲ್ಲಿ ಸ್ಥಳದಲ್ಲಿ ಇನ್ನೇನು ನೋಡಿದ್ದೀರಾ ಎಂದರೆ ಸಾಕ್ಷಿ ಚಾಕು ಬಿದ್ದಿದ್ದನ್ನು ನೋಡಿದ್ದೇನೆ ಎಂದು ನುಡಿದಿದ್ದಾರೆ. ಸಾಕ್ಷಿಗೆ ನೀವು ಆ ರೀತಿ ಚಾಕು ಬಿದ್ದಿದ್ದನ್ನು ನೋಡಿದೇನೆ ಎಂದು ಪೊಲೀಸರಿಗೆ ಹೇಳಿದ್ದೀರಾ ಎಂದರೆ ಸಾಕ್ಷಿ - ಆ ನಂತರ ಪೊಲೀಸರು ಬಂದಾಗ ಅವರೇ ನೋಡಿದ್ದಾರೆ ಎಂದು ನುಡಿದಿದ್ದಾರೆ. ಸಾಕ್ಷಿಗೆ ಪೊಲೀಸರು ಎಷ್ಟು ಗಂಟೆಗೆ ಬಂದಿದ್ದರು ಎಂದರೆ ಸಾಕ್ಷಿ - ಮಧ್ಯರಾತ್ರಿ 1-00 ಗಂಟೆಗೆ ಐದು ನಿಮಿಷ ಹಿಂದು ಮುಂದೆ ಬಂದಿದ್ದರು , ಆಗ ನೋಡಿದ್ದಾರೆ ಎಂದು ನುಡಿದಿದ್ದಾರೆ. ಆ ಡೆಡ್ ಬಾಡಿಯನ್ನು ಪೊಲೀಸರು ಏನು ಮಾಡಿದರು ಎಂದರೆ ಸಾಕ್ಷಿ ನಮ್ಮನ್ನು ಪೊಲೀಸರು ಅಲ್ಲಿಂದ ಕರೆದುಕೊಂಡು ಹೋದರು ಎಂದು ನುಡಿದಿರುತ್ತಾರೆ. ಡೆಡ್ ಬಾಡಿಯನ್ನು ಏನು ಮಾಡಿದರು ಎಂದರೆ ಸಾಕ್ಷಿ - ಆ ನಂತರ ದಾವಣಗೆರೆಗೆ ತೆಗೆದುಕೊಂಡು ಬಂದರು ಎಂದು ಗೊತ್ತಾಯಿತು ಎಂದು ನುಡಿದಿರುತ್ತಾರೆ. ಅಂದಾಜು ಮಧ್ಯರಾತ್ರಿ 2-00 ಗಂಟೆಗೆ ಡೆಡ್ ಬಾಡಿ ತಂದಿದ್ದಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ನಿಮ್ಮನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದಾಗ ನಡೆದ ವಿಚಾರವನ್ನು ನೀವು ಹೇಳಿದ್ದೀರಾ ಅಥವಾ ಹಬಿದ್ ಹೇಳಿದರಾ ಎಂರದೆ ಸಾಕ್ಷಿ ಇಬ್ಬರು ಹೇಳಿದ್ದೇವೆ ಎಂದು ನುಡಿದಿರುತ್ತಾರೆ. ಇಬ್ಬರು ಹೇಳಿದ್ದನ್ನು ಪೊಲೀಸರು ಬರೆದುಕೊಂಡಿದ್ದಾರೆ. ಪೊಲೀಸರು ಇಬ್ಬರ ಸಹಿ ಪಡೆದಿದ್ದಾರೆ ಎಂದು ನುಡಿದಿರುತ್ತಾರೆ.

ದಿನಾಂಕ 16-03-2023 ರಂದು 2 ನೇ ಆರೋಪಿ ಬರ್ಥಡೇ ಪಾರ್ಟಿ ಇರಲಿಲ್ಲ ಎನ್ನುವುದು ಸರಿಯಲ್ಲ. ದಿನಾಂಕ 16-03-2023 ರಂದು ಮತ್ತು 17-03-2023 ರಂದು ನಿಮ್ಮ ಮೊಬೈಲ ನಿಮ್ಮ ಬಳಿಯೇ ಇತ್ತು ಎಂದರೆ ನನ್ನ ಬಳಿ ಇರಲಿಲ್ಲ ಎಂದು ನುಡಿದಿದ್ದಾರೆ. ಸಾಕ್ಷಿಗೆ ದಿನಾಂಕ 16-03-2023 ರಂದು 09-54-42 ನಿಮಿಷಕ್ಕೆ ಅತಿಕಾ ಅವರಿಗೆ, ನಿವೇ ಕರೆ ಮಾಡಿ 22 ಸೆಕೆಂಡ ಮಾತನಾಡಿದ್ದೀರಿ ಎಂದರೆ ಅವರು ನನ್ನ ತಾಯಿ. 1 ನೇ ಆರೋಪಿ ನನಗೆ ಕರೆ ಬಂದಿದ್ದರಿಂದ ನನ್ನ ಅಮ್ಮ ಫೋನ ಮಾಡಿದ್ದರಿಂದ ನನಗೆ ಫೋನ ಕೊಟ್ಟಿದ್ದಾನೆ. ಆದ್ದರಿಂದ ಮಾತನಾಡಿರುತ್ತೇನೆ. ಸಾಕ್ಷಿ 1 ನೇ ಆರೋಪಿ ನನ್ನ ಫೋನ ಪಡೆದುಕೊಂಡಿದ್ದ ಎಂದು ನುಡಿದಿರುತ್ತಾರೆ. ಸದರಿ ವಿಷಯವನ್ನು ಪೋಲೀಸರ ಮುಂದೆ ಹೇಳಿಲ್ಲ. ಅದೇ ದಿನ 10-00

ಗಂಟೆಗೆ ಅಮ್ಮು ಕಲಂದರ ಅವರಿಗೆ ನೀನು ಮಾತನಾಡಿದ್ದೀಯ ಎಂದರೆ ನಾನು ಮಾತನಾಡಿದ್ದೇನೆ ಎಂದು ನುಡಿದಿದ್ದಾರೆ. ಸಾಕ್ಷಿಗೆ ನ್ಯಾಯಾಲಯವು ಆ ಸಮಯದಲ್ಲಿ 1 ನೇ ಆರೋಪಿ ಬಳಿ ಫೋನ ಇದ್ದಾಗ ನೀನು ಯಾವ ರೀತಿ ಮಾತಿನಾಡಿದೆ ಎಂದರೆ ಬಿಯರ್ ಮುಗಿದಿದ್ದರಿಂದ ನಸ್ರುಲ್ಲ ಬಿಯರ್ ತೆಗೆದುಕೊಂಡು ಬರಲು ಕಳಿಸಿದ್ದ ಆಗ ಫೋನ ತೆಗೆದುಕೊಂಡು ಮಾತನಾಡಿದೆ ಎಂದು ನುಡಿದಿದ್ದಾರೆ. ಪುನಃ ಅವರಿಗೆ ಫೋನ ಕೊಟ್ಟಿದ್ದೇನೆ ಎಂದು ನುಡಿದಿದ್ದಾರೆ. ಈ ವಿಷಯವನ್ನು ನೀನು ಪೋಲೀಸರಿಗೆ ಹೇಳಿಲ್ಲ ಎಂದರೆ - ಇಲ್ಲ ಎಂದು ನುಡಿದಿದ್ದಾರೆ. ಅದೇ ದಿನ ನೀವು ಛಾಯಾ ತರಕಾರಿ ಕಲಂದರ ನೇಹಾ ಮತ್ತು ಇತರರು ನಿಮ್ಮ ಫೋನಿನಿಂದ ಮಾತನಾಡಿದ್ದೀರ ಎಂದರೆ ಆ ಸಮಯದಲ್ಲಿ ಫೋನ 1 ನೇ ಆರೋಪಿಯ ಬಳಿ ಇತ್ತು ಅವನೇ ಮಾತನಾಡಿರಬಹುದು ಎಂದು ನುಡಿದಿದ್ದಾರೆ. ಹಾಡು ಕೇಳಲು ಪಡೆದುಕೊಂಡಿದ್ದ ಮೊಬೈಲನಲ್ಲಿ 1 ನೇ ಆರೋಪಿ ಈ ರೀತಿ ಮಾತನಾಡಿದ್ದಾರೆ ಎಂದು ಪೋಲೀಸರ ಮುಂದೆ ಹೇಳಿದ್ದೀರಾ ಎಂದರೆ - ಹೇಳಿಲ್ಲ ಎಂದು ನುಡಿದಿದ್ದಾರೆ. ಈ ವಿಷಯವನ್ನು ಪೋಲೀಸರಿಗೆ ಹೇಳಲು ಎನಾದರೂ ಅಡ್ಡಿ ಆತಂಕ ಇತ್ತಾ ಎಂದರೆ - ಇಲ್ಲ ಎಂದು ನುಡಿದಿದ್ದಾರೆ. ಅಬೀದುಲ್ಲಾ ಮತ್ತು ಫಾರೂಕ ಇವರ ನಡುವೆ ಸಂಬಂಧ ಸರಿ ಇಲ್ಲ ಎನ್ನುವ ವಿಚಾರ ನಿನಗೆ ಮತ್ತು ನಿನ್ನ ತಂದೆಗೆ ಸರಿ ಇಲ್ಲ ಎನ್ನುವ ವಿಚಾರ ನಿನಗೆ ಮತ್ತು ನಿನ್ನ ತಂದೆಯವರಿಗೆ ತುಂಬಾ ಚೆನ್ನಾಗಿ ಗೊತ್ತಿತ್ತು ಎಂದರೆ ಅರ್ಥ ಏನು ಎಂದು ಪ್ರಶ್ನಿಸಿರುತ್ತಾರೆ. ಅವರಿಬ್ಬರ ಮಧ್ಯ ಅಂಥದ್ದೇನೂ ಇರಲಿಲ್ಲ ಕ್ಲೊಸ ಆಗಿದ್ದರು ಎಂದು ನುಡಿದಿದ್ದಾರೆ. ನಿಮಗೂ ಮತ್ತು ಫಾರುಕುಲ್ಲಾಗೂ ಸಂಬಂಧ ಸರಿ ಇರಲಿಲ್ಲ ಎಂದರೆ ಆ ರೀತಿ ಹೇಳುವುದು ಸರಿ ಅಲ್ಲ ನಾವು ಚೆನ್ನಾಗಿದ್ದೆವು ಎಂದು ನುಡಿದಿದ್ದಾರೆ. ಆ ಉದ್ದ್ೇಶದಿಂದ ನಿಮ್ಮ ಮತ್ತು ನಿಮ್ಮ ತಂದೆಯ ಉದ್ದೇಶ ಫಾರುಕುಲ್ಲಾ ನನ್ನು ಎತ್ತಿಹಾಕಬೇಕು ಇಲ್ಲಾ ಕೊಲೆ ಮಾಡಬೇಕು ಎಂದು ಆಗಿತ್ತು ಎಂದರೆ ಆ ರೀತಿ ಏನೂ ಇರಲಿಲ್ಲ ಎಂದು ನುಡಿದಿರುತ್ತಾರೆ. ನಿಮ್ಮ ಉದ್ದೇಶಕ್ಕೆ ಸರಿಯಾಗಿ ಫಾರೂಕುಲ್ಲಾ ಹಾಗೂ ಅಬೀದಗೆ ಗಲಾಟೆ ಆಗಿದ್ದರಿಂದ ನೀವು ಮತ್ತು ನಿಮ್ಮ ತಂದೆ ಅಬೀದಗೆ ಸಹಕಾರ ಕೊಟ್ಟಿದ್ದೀರ ಎಂದರೆ ಇಲ್ಲ ಎಂದು ನುಡಿದಿದ್ದಾರೆ. ಸಾಕ್ಷಿಗೆ ದಿನಾಂಕ 17-03-2023 ರಂದು ಮಧ್ಯ ರಾತ್ರಿ 00-30 ಗಂಟೆಯಿಂದ 01-30 ಗಂಟೆ ಮಧ್ಯ ಅಬೀದ ಮತ್ತು ಫಾರೂಕುಲ್ಲಾ ಇವರ ನಡುವೆ ಜಗಳ ಆಗಿದೆ ಎಂದರೆ ಆ ರೀತಿ ಹೇಳುವುದು ಸರಿಯಲ್ಲ. ನಸ್ರುಲ್ಲ ಮತ್ತು ಫಾರುಕ ಸೇರಿ ಫಾರುಕನನ್ನು ಕೊಲೆ ಮಾಡಿದ್ದಾರೆ. ಅವರಿಬ್ಬರೂ ಆ ರೀತಿ ಜಗಳ ಆಡುತ್ತಾರೆ ಎಂದು ನುಡಿದ್ದಾರೆ. ಫಾರೂಕ ಸ್ಥಳಕ್ಕೆ ಬಂದಿದ್ದ

ಸಂದರ್ಭದಲ್ಲಿ ಫಾರೂಕ ಸ್ಥಳಕ್ಕೆ ಬಂದಿದ್ದ ಸಂದರ್ಭದಲ್ಲಿ ಆತ ಸಂಪೂರ್ಣವಾಗಿ ಕುಡಿದಿದ್ದ ಎಂದರೆ ಆತ ಕುಡಿದಿರಲಿಲ್ಲ ಎಂದು ನುಡಿದಿದ್ದಾರೆ. ಫಾರುಕುಲ್ಲ ಸಾಕಷ್ಟು ಕುಡಿದಿದ್ದ ಎನ್ನುವುದು ಸರಿಯಲ್ಲ. ಆ ರೀತಿ ಫಾರೂಕುಲ್ಲಾ ಸಾಕಷ್ಟು ಕುಡಿದಿದ್ದರಿಂದ ಒಡೆದಿದ್ದ ಬಾಟಲಿಗಳ ಮೇಲೆ ಬಿದ್ದಿದ್ದರಿಂದ ಆತನ ಕುತ್ತಿಗೆಗೆ ಮತ್ತು ಬೆನ್ನಿಗೆ ಗ್ಲಾಸ ಚುಚ್ಚಿ ಗಾಯ ಆಗಿತ್ತು ಎಂದರೆ ಆ ರೀತಿ ಹೇಳುವುದು ಸರಿಯಲ್ಲ ಎಂದು ನುಡಿದಿದ್ದಾರೆ. ಕುಡಿದ ಅಮಲಿನಲ್ಲಿ ಬೆನ್ನಿಗೆ ಆ ರೀತಿ ಗಾಯ ಆಗಿತ್ತು ಎಂದರೆ ಆ ರೀತಿ ಹೇಳುವುದು ಸರಿಯಲ್ಲ ಎಂದು ನುಡಿದಿದ್ದಾರೆ. ನಿಮ್ಮ ಫೋನನ್ನು 1 ನೇ ಆರೋಪಿ ಕಿತ್ತುಕೊಂಡಿದ್ದರು ಮತ್ತು ಮನ್ಸೂರರವರ ಬರ್ಥಡೇ ಪಾರ್ಟಿ ಇತ್ತು ನನ್ನ ಫೋನನ್ನು ನಸ್ರುಲ್ಲಾ ತೆಗೆದುಕೊಂಡು ಹಾಡನ್ನು ಕೇಳುತ್ತಿದ್ದ ಎಂದು ನೀನು ನಿನ್ನ ತಂದೆ ಮತ್ತು ಅಬೀದ ಸೇರಿ ಕಟ್ಟು ಕಥೆ ಹೇಳುತ್ತಿದ್ದೀರ ಎಂದರೆ ಆ ರೀತಿ ಹೇಳುವುದು ಸರಿ ಅಲ್ಲ ಎಂದು ನುಡಿದಿದ್ದಾರೆ. ದಿನಾಂಕ 16-03-2023 ರಂದು ಹೊಂಗೆ ಮರದ ಕೆಳಗೆ ನೀವು ಯಾವುದೇ ಪಾರ್ಟಿ ಮಾಡಿಲ್ಲ ನಸ್ರುಲ್ಲಾ ಮತ್ತು ಮನ್ಸೂರ್ ಆ ಪಾರ್ಟಿಗೆ ಬಂದಿಲ್ಲ ಎಂದರೆ ಅವರು ಬಂದಿದ್ದರು ಮತ್ತು ಮನ್ಸೂರ್‌ನ ಬರ್ಥಡೇ ಕಾರ್ಯಕ್ರಮ ಇತ್ತು ಎಂದು ನುಡಿದಿದ್ದಾರೆ 1 ನೇ ಆರೋಪಿ ಫೋನನ ವಿಚಾರವಾಗಿ ಫಾರೂಕುಲ್ಲಾನಿಗೆ ಚಾಕುಕುವಿನಿಂದ ಚುಚ್ಚಿದ್ದಾನೆ ಎಂದು ಸುಳ್ಳು ಹೇಳಿದ್ದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಗೆ ನಸ್ರುಲ್ಲ ಚಾಕು ಚುಚ್ಚಿದ್ದಾನೆ ಮನ್ಸೂರ ಚಾಕು ಚುಚ್ಚಿದ್ದಾನೆ 2 ಚಾಕು ಇದ್ದವಾ ಎಂದರೆ 2 ಚಾಕು ಇದ್ದವು ಎಂದು ನುಡಿದಿದ್ದಾರೆ. ಅಂದರೆ ನಸ್ರುಲ್ಲ ಮತ್ತು ಮನ್ಸೂರ ಇಬ್ಬರ ಕೈಯಲ್ಲೂ ಒಂದೊಂದು ಚಾಕು ಇದ್ದವು ಎಂದು ಹೇಳಿದ್ದಾರೆ. 2 ಚಾಕೂ ಇದ್ದವು ಎಂದು ಪೋಲೀಸರಿಗೆ ಹೇಳಿದ್ದೀರ ಎಂದರೆ ಹೇಳಿದ್ದೇನೆ ಎಂದು ನುಡಿದಿದ್ದಾರೆ. ಅಂದರೆ ಬೆಳಿಗ್ಗೆ 4 ಗಂಟೆ ಸಮಯದಲ್ಲಿ ನೀವು ಸಹಿ ಮಾಡಿದ ಸಂದರ್ಭದಲ್ಲಿ ಈ ಎಲ್ಲಾ ವಿಷಯ ಹೇಳಿದ್ದೀರಾ ಎಂದರೆ ಹೇಳಿದ್ದೇನೆ ಎಂದು ನುಡಿದಿದ್ದಾರೆ. ಇಬ್ಬರೂ ಆರೋಪಿಗಳೂ ಬೇರೆ ಬೇರೆ ಚಾಕುವಿನಿಂದ ಚುಚ್ಚಿ ಗಾಯ ಪಡಿಸಿದ್ದಾರೆ ಎಂದು ಸೃಷ್ಟಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ನಿಮ್ಮ ತಂದೆ ನೀವು ನ್ಯಾಯಾಲಯದಲ್ಲಿ ಹೇಳಿದ್ದನ್ನು ಕೇಳಿಸಿಕೊಂಡು ಮನೆಗೆ ಹೋಗಿ ಬೈದಿರುವ ಕಾರಣ ಪುನಃ ತಿರುಚಿ ಸಾಕ್ಷಿ ಹೇಳುತ್ತಿದ್ದೀರ ಎಂದರೆ ನಾನು ಈ ದಿನ ಹೇಳಿರುವುದು ಸರಿ ಇರುತ್ತದೆ ಎಂದು ನುಡಿದಿದ್ದಾರೆ. ಅಬೀದನನ್ನು ಮತ್ತು ನಿಮ್ಮ ತಂದೆಯನ್ನು ಸಂರಕ್ಷಣೆ ಮಾಡಬೇಕು ಎಂದು ಸುಳ್ಳು ಹೇಳುತ್ತಿದ್ದೀರ ಎಂದರೆ ಸುಳ್ಳು ಹೇಳುತ್ತಿಲ್ಲ ಎಂದು ನುಡಿದಿದ್ದಾರೆ. ಸಾಕ್ಷಿಗೆ ಈ ದಿನ ನ್ಯಾಯಾಲಯದಲ್ಲಿ ಹಾಜರು ಮಾಡಿದ

ಸದರಿ ಚಾಕು ಅದೇ ಎಂದು ನುಡಿದಿರುತ್ತಾರೆ. ಚಾಕುವಿನ ಎಷ್ಟು ಭಾಗ ಕತ್ತಿನ ಬಳಿ ಒಳಗಡೆ ಹೋಗಿತ್ತು ಎಂದರೆ ಅದನ್ನು ನೋಡಿಲ್ಲ ಒಳಗಡೆ ಹೋಗಿತ್ತು ಎಂದು ನುಡಿದಿದ್ದಾರೆ. ಹಿಂಭಾಗದಲ್ಲಿ ಉಪಯೋಗಿಸಿದ್ದ ಚಾಕೂ ಎಷ್ಟು ಭಾಗ ಒಳಗಡೆ ಹೋಗಿತ್ತು ಎಂದರೆ ಅವರು ಹೊಡೆದಿದ್ದನ್ನು ನೋಡಿದ್ದೇನೆ ಎಷ್ಟು ಒಳಗಡೆ ಹೋಗಿತ್ತು ಎಂದು ನೋಡಿಲ್ಲ ಎಂದು ನುಡಿದಿರುತ್ತಾರೆ. ಮೋಟಾರ ಸೈಕಲನ ಬೆಳಕಿನಲ್ಲಿ ನೋಡಿರುವುದು ಸಂಪೂರ್ಣ ಸುಳ್ಳು ಎಂದರೆ ನೋಡಿರುವುದನ್ನು ಹೇಳಿದ್ದೇನೆ ಎಂದು ನುಡಿದಿದ್ದಾರೆ. ನ್ಯಾಯಾಲಯದ ಮುಂದೆ ಇರುವ ಚಾಕು ಯಾರ ಬಳಿ ಇತ್ತು ಎಂದರೆ ಇಬ್ಬರ ಕೈಯಲ್ಲೂ ಚಾಕೂ ಇತ್ತು ಎಂದು ನುಡಿದಿದಾದರೆ. ನಿಮ್ಮ ತಂದೆಯವರ ಕುಮ್ಮಕ್ಕಿನಿಂದ ಚಾಕುವನ್ನು ನೋಡಿ ಗುರುತಿಸಿದ್ದೀರ ಎಂದರೆ ಆ ರೀತಿ ಹೇಳುವುದು ಸರಿ ಅಲ್ಲ ಎಂದು ನುಡಿದಿದ್ದಾರೆ.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.94/2023

PW- 05

CW- 15

ಪ್ರ. ಬೋ. ದಿನಾಂಕಃ 04-01-2024

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಖಲಂದರ್ ಭಾಷಾ |
| ತಂದೆ/ಗಂಡನ ಹೆಸರು | : | ಮುಸ್ತಾಕ್ |
| ವಯಸ್ಸು | : | 24 ವರ್ಷ |
| ಉದ್ಯೋಗ | : | ಮೋಟರ್ ವೈಂಡಿಗ್ ಕೆಲಸ |
| ವಾಸ | : | ಹೊನ್ನಾಳಿ |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಚಾಸಾ.9 ರಿಂದ 14, 16 ರಿಂದ 19 ನನಗೆ ಗೊತ್ತು. ಈ ಪ್ರಕರಣದ ಆರೋಪಿತರು ನನಗೆ ಗೊತ್ತು. ಅವರೆಲ್ಲ ನನಗೆ ಸ್ನೇಹಿತರಾಗಿರುತ್ತಾರೆ. ಮೃತ ಫಾರುಕ್ ಉಲ್ಲಾ ನನಗೆ ಗೊತ್ತು.

ದಿ.16-03-2023 ರಂದು ನಾನು , ಸುಲೇಮಾನ್ , ತರಕಾರಿ ಖಲಂದರ್ , ಸುಹೇಲ್ ಖಲಂದರ್ ಜಮೀರ್ ಖಾನ್ , ತನ್ವಿರ್ , ಇರ್ಶಾದ್ , ಮುಬಾರಕ್, ಅಮ್ಮು ಖಲಂದರ್ ಎಲ್ಲರೂ ಗೊಲ್ಲರಹಳ್ಳಿ ಗ್ರಾಮದ ತುಂಗಭದ್ರಾ ಹೊಳೆಯ ದಂಡೆ ಬಳಿ 2 ನೇ ಆರೋಪಿ ಮನ್ಸೂರ್ ನ ಬರ್ತಡೇ ಪಾರ್ಟಿ ಮಾಡಲು ಹೋಗಿದ್ದೇವು. 1 ನೇ ಆರೋಪಿ ನನಗೆ ಗೊತ್ತು.

ಬರ್ತಡೇಗೆ ಕೇಕ್ ತಂದಿದ್ದರು, ಕೇಕ್ ಕಟ್ ಮಾಡಿದೇವೆ. ಬಿರಿಯಾನಿ ಇತ್ತು , ಬಿರಿಯಾನಿ ತಿಂದಿದ್ದೇವೆ. ಆ ಸಂದರ್ಭದಲ್ಲಿ 1 ನೇ ಆರೋಪಿ ಚಾಸಾ-10 ರವರ ಬಳಿ ಮೋಬೈಲನ್ನು ಹಾಡು ಕೇಳಲು ಪಡೆದಿದ್ದ. ಊಟ ಮಾಡಿದ ಮೇಲೆ ನಾವು ಮನೆಗೆ ಹೋಗಬೇಕೆಂದು ಹೋಗುತ್ತಿದ್ದಾಗ ಚಾಸಾ-10 ರವರು 1 ನೇ ಆರೋಪಿಗೆ ತನ್ನ ಮೋಬೈಲ್ ಕೊಡಿ ಎಂದು ಕೇಳಿದ. ಅದಕ್ಕೆ 1 ನೇ ಆರೋಪಿ ಬೆಳಿಗ್ಗೆ ಕೊಡುತ್ತೇನೆ ಹೋಗು ಎಂದು ಹೇಳಿದ. ಅದಕ್ಕೆ ಚಾಸಾ-10 ರವರು ನಮ್ಮ ಮನೆಯಲ್ಲಿ ಅಪ್ಪಾಜಿ ಬೈಯುತ್ತಾರೆ , ನನ್ನ ಮೋಬೈಲ್ ಕೊಡು, ನಾನು ಹೋಗುತ್ತೇನೆ ಎಂದು 1 ನೇ ಆರೋಪಿಗೆ ಕೇಳಿದ. ಆ ನಂತರ

ನಾವು ಅಲ್ಲಿಂದ ನಮ್ಮ ನಮ್ಮ ಮನೆಗೆ ಹೋಗಿರುತ್ತೇವೆ.

ಬೆಳಗಿನ ಜಾವ 6-30, 7-00 ಗಂಟೆ ಸಮಯದಲ್ಲಿ ನಾನು ಗ್ಯಾರೇಜ್ ಗೆ ಹೋಗಬೇಕೆಂದು ಹೊರಟಿದ್ದಾಗ ಚಾಸಾ-10 ಬಂದು ಬರ್ತಡೇ ಪರ್ಟಿ ಮಾಡಿದ ಸ್ಥಳದಲ್ಲಿ ಮರ್ಡರ್ ಆಗಿದೆ, ಫಾರುಕ್ ಗೆ ಆತನ ಎಡಭಾಗದ ಕತ್ತಿನ ಬಳಿ ಚಾಕುವಿನಿಂದ ಇರಿದಿದ್ದಾರೆ, ಹಬಿದ್ ರವರಿಗೆ ಮುಖಕ್ಕೆ ಹೊಡೆದಿದ್ದಾರೆ ಎಂದು ತಿಳಿಸಿದ. ನಾನು ಮೋಬೈಲ್ ಬಿಟ್ಟು ಬಂದಿದ್ದನಲ್ಲಾ ಆ ಕಾರಣಕ್ಕೆ ಈ ರೀತಿ ಆಗಿದೆ ಎಂದು ಹೇಳಿದ. ನಿನ್ನೆ ರಾತ್ರಿ ನನ್ನ ತಂದೆ ನನ್ನ ಮೋಬೈಲ್ ಗೆ ಫೋನ್ ಮಾಡಿದ್ದರು, ಆಗ 1 ನೇ ಆರೋಪಿ ನಿಮಗೆ ದಮ್ಮ ಇದ್ದರೆ ಬನ್ನಿ, ಮೋಬೈಲ್ ಪಡೆದುಕೊಂಡು ಹೋಗಿ ಎಂದು ಹೇಳಿದ. ಚಾಸಾ-10 ಮತ್ತು ಆತನ ತಂದೆ ಮೋಬೈಲ್ ಪಡೆದುಕೊಳ್ಳಲು ಹೊಳೆ ದಂಡೆಬಳಿ ಹೋಗುತ್ತಿದ್ದಾಗ ಫಾರುಕ್ ಮತ್ತು ಹಬಿದುಲ್ಲಾ ಬಿಎಸ್ ಎನ್ ಎಲ್ ಕಛೇರಿ ಬಳಿ ನಿಂತಿದ್ದಾಗ – ನನ್ನ ತಂದೆ ಮೋಬೈಲ್ ಪಡೆದುಕೊಂಡು ಬಂದು ಕೊಡಿ ಎಂದು ನನ್ನ ಜೊತೆ ಕಳುಹಿಸಿಕೊಟ್ಟರು , ಆಗ ನನ್ನ ಜೊತೆ ಫಾರುಕ್ ಮತ್ತು ಹಬಿದ್ರವರು ಸ್ಥಳಕ್ಕೆ ಬಂದಾಗ , ಚಾಸಾ-9 ರವರು ಚಾಸಾ-10 ರವರ ಮೋಬೈಲ್ ಫೋನ್ ಕೊಡು ಎಂದು 1 ನೇ ಆರೋಪಿಯನ್ನುಕೇಳಿದ್ದಾರೆ , ಆಗ ಆರೋಪಿತರು ಮೋಬೈಲ್ ಕೊಡುವುದಿಲ್ಲ, ನೀನಾರು ಕೇಳಲು , ನಿನಗೆ ಸಂಬಂಧವಿಲ್ಲ ಸೂಳೇಮಗನೆ , ಬೋಳಿಮಗನೆ ಎಂದು ಬೈದಿದ್ದು , ಆಗ ಫಾರುಕ್ ಬೈಯಬೇಡಿ , ಮೋಬೈಲ್ ಕೂಡಿ , ನಾವು ಹೋಗುತ್ತೇವೆ ಎಂದು ಹೇಳಿದಾಗ ಆರೋಪಿತರು ನಿನ್ನನ್ನು ಬಿಡುವುದಿಲ್ಲ , ಸಾಯಿಸುತ್ತೇವೆ ಎಂದು ಹೇಳಿ ಚಾಕುವಿನಿಂದ ಫಾರುಕ್ ನ ಮೇಲೆ ಆರೋಪಿ ನಸ್ರೂಲ್ಲಾ ಎಡ ಕುತ್ತಿಗೆ ಭಾಗಕ್ಕೆ ಹಾಕಿದ್ದಾರೆ, ಹಬಿದ್ ಬಿಡಿಸಲು ಹೋದಾಗ ಆತನ ಮುಖಕ್ಕೆ ಹೊಡೆದಿದ್ದಾರೆ , ಆಗ ಮನ್ಸೂರ್ ನು ಚಾಕುವಿನಿಂದ ಫಾರುಕ್ ನ ಹಿಂಭಾಗಕ್ಕೆ ಹಾಕಿದ್ದಾರೆ ಎಂದು ಚಾಸಾ-10 ನನಗೆ ತಿಳಿಸಿದ. 2 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ನಸ್ರೂಲ್ಲಾ ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯಾಗಿರುತ್ತಾನೆ.

ಆ ದಿನ ಬರ್ತ್ ಡೇ ಪಾರ್ಟಿಯಲ್ಲಿ ಉಪಯೋಗಿಸಿದ ವಸ್ತುಗಳು ಎಂದು ಮು.ಮಾ.4 ಮತ್ತು 5 ನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀಸವಾಲು:-</u> ಆರೋಪಿ ಪರ ಶ್ರೀ ಎಸ್ ಎಂ ಎಲ್ ವಕೀಲರಿಂದ.

ಚಾಸಾ-10 ನಿಮಗೆ ವಿಷಯವನ್ನು ತಿಳಿಸಿದ ನಂತರ ನೀವು ಪೊಲೀಸರಿಗೆ ವಿಷಯವನ್ನು ತಿಳಿಸಿದ್ದೀರಾ ಎಂದರೆ ಸಾಕ್ಷಿ ನಾನು ತಿಳಿಸಿಲ್ಲ ಎಂದು ನುಡಿದಿರುತ್ತಾರೆ.

ಪೊಲೀಸರಿಗೆ ತಿಳಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ - ಕೇಸು ಆಗಿದೆ ಎಂದು ಚಾಸಾ-10 ತಿಳಿಸಿದ ಎಂದು ನುಡಿದಿರುತ್ತಾರೆ.

ಬರ್ತ್ಡೇ ಪಾರ್ಟಿಯಲ್ಲಿ ಕ್ಯಾಂಡಲ್ ಮತ್ತು ಪೇಪರ್ ಶಾರ್ಟ್ ತಂದಿದ್ದರು ಎಂದು ಪೊಲೀಸರ ಮುಂದೆ ಹೇಳಿದ್ದೀರಾ ಎಂದರೆ ಸಾಕ್ಷಿ - ಹೇಳಿಲ್ಲ ಎಂದು ನುಡಿದಿರುತ್ತಾರೆ. ಮು.ಮಾ.4 ಮತ್ತು 5 ಪೇಪರ್ ಶಾರ್ಟ್ ಮತ್ತು ಕ್ಯಾಂಡಲನ್ನು ನಾವು ಮತ್ತು ಪೊಲೀಸರು ಸೇರಿ ಸೃಷ್ಟಿಸಿದ್ದೇವೆ ಎನ್ನುವುದು ಸರಿಯಲ್ಲ.

ನಿನ್ನ ಬಳಿ ಆ ದಿನ ಸ್ಮಾರ್ಟ ಫೋನ್ ತ್ತಾ ಎಂದರೆ ಸಾಕ್ಷಿ ಇತ್ತು ಎಂದು ನುಡಿದಿರುತ್ತಾರೆ. ನೀವು ಫೋಟೋ ಮತ್ತು ವಿಡಿಯೋ ತೆಗೆದಿದ್ದೀರಾ ಎಂದರೆ ಸಾಕ್ಷಿ -ನಾನು ತೆಗೆದಿಲ್ಲ , ಜಮೀರ್ ಖಲಂದರ್ ಫೋಟೋ ಮತ್ತು ವಿಡಿಯೋ ತೆಗೆದಿದ್ದಾರೆ ಎಂದು ನುಡಿದಿರುತ್ತಾರೆ. ನನಗೆ ಮದ್ಯಪಾನ ಮಾಡುವ ಅಭ್ಯಾಸವಿಲ್ಲ. ನಾಲ್ಕೈದು ಜನ ಮದ್ಯಪಾನ ಮಾಡಿದ್ದಾರೆ , ಆದರೆ ನಾನು ಆ ಕಡೆ ಗಮನ ಕೊಟ್ಟಿಲ್ಲ. ಎಷ್ಟು ಫುಲ್ ಬಾಟಲ್ ತಂದಿದ್ದರು ಎಂದರೆ ಸಾಕ್ಷಿ - ಮೂರರಿಂದ ನಾಲ್ಕು ಫುಲ್ ಬಾಟಲ್ ತಂದಿದ್ದರು ಎಂದು ನುಡಿದಿದ್ದಾರೆ. ವಿಸ್ಕಿ ನೋ ಅಥವಾ ರಮ್ ತಂದಿದ್ದರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

ಸುಮಾರು 9-00 ರಿಂದ 9-30 ಗಂಟೆಯಿಂದ ಮಧ್ಯಾಪಾನ ಮಾಡಲು ಪ್ರಾರಂಭ ಮಾಡಿದರು. ಎಷ್ಟು ಹೊತ್ತಿನವರೆಗೆ ಕುಡಿದಿದ್ದಾರೆ ಎಂದರೆ - ನಾನು ಆ ಕಡೆ ಗಮನ ಕೊಟ್ಟಿಲ್ಲ ಎಂದು ನುಡಿದಿದ್ದಾರೆ. ಯಾರು ಯಾರು ಕುಡಿದಿದ್ದಾರೆ ಎಂದು ನಿಮಗೆ ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿ - ನಾನು ಗಮನಿಸಿರುವುದಿಲ್ಲ ಎಂದು ನುಡಿದಿದ್ದಾರೆ.

ಕೇಕ್ ಕಟ್ ಮಾಡಿದಾಗ ಎಷ್ಟು ಗಂಟೆಯಾಗಿತ್ತು ಎಂದರೆ ಸಾಕ್ಷಿ ರಾತ್ರಿ 10-00 ಗಂಟೆ ಒಳಗಡೆಯಾಗಿತ್ತು ಎಂದು ನುಡಿದಿರುತ್ತಾರೆ. ಬರ್ತಡೇ ಪಾರ್ಟಿ ಕೇಕ್ ಕಟ್ ಮಾಡಿದ ನಂತರ ಚಿಕನ್ ಬಿರಿಯಾನಿ ತಿನ್ನಲು ಪ್ರಾರಂಭಿಸಿದಿರೋ ಅಥವಾ ಮೊದಲೇ ಪ್ರಾರಂಭಿಸಿದಿರೋ ಎಂದರೆ ಸಾಕ್ಷಿ ಕೇಕ್ ಕಟ್ಟ ಮಾಡಿದ ನಂತರ ಪ್ರಾರಂಭಿಸಿದ್ದೇವು ಎಂದು ನುಡಿದಿರುತ್ತಾರೆ. ಎಲ್ಲಾ ಕೇಕ್ ಮತ್ತು ಬೀರಿಯಾನಿ ತಿಂದ ನಂತರ ಕೈ ತೊಳೆದಾಗ ಎಷ್ಟು ಗಂಟೆಯಾಗಿತ್ತು ಎಂದರೆಸಾಕ್ಷಿ - ರಾತ್ರಿ 10-15 ಗಂಟೆಯಾಗಿತ್ತು ಎಂದು ನುಡಿದಿರುತ್ತಾರೆ ಸದರಿ ಸ್ಥಳ ನಿರ್ಜನ ಪ್ರದೇಶ ಎನ್ನುವುದು ಸರಿ. ನೀವು ಇದ್ದ ಸ್ಥಳದಿಂದ ಹೊಳೆ ದಂಡೆ ಎಷ್ಟು ದೂರದಲ್ಲಿತ್ತು ಎಂದರೆ ಸಾಕ್ಷಿ ಸುಮಾರು 40 ಅಡಿ ದೂರದಲ್ಲಿತ್ತು ಎಂದು ನುಡಿದಿರುತ್ತಾರೆ. ಆ

ಪ್ರದೇಶದಲ್ಲಿ ಲೈಟ್ ಇರಲಿಲ್ಲ ಎಂದರೆ ಸಾಕ್ಷಿ ಇರಲಿಲ್ಲ ಎಂದು ನುಡಿದಿರುತ್ತಾರೆ.

ಚಾಸಾ-10 ರವರ ಮೋಬೈಲನ್ನು ಪಡೆದಾಗ ಎಷ್ಟು ಗಂಟೆಯಾಗಿತ್ತು ಎಂದರೆ- ಸಾಕ್ಷಿ ರಾತ್ರಿ 9-00 ಗಂಟೆಯ ನಂತರ ಎಂದುನುಡಿದಿರುತ್ತಾರೆ. 1 ನೇ ಆರೋಪಿ ಪಡೆದುಕೊಂಡ ಮೋಬೈಲ್ ಕೇವಲ ಹಾಡು ಕೇಳಲು ಬಳಕೆಯಾಯಿತೋ ಅಥವಾ ಬೇರೆ ಉದ್ದೇಶಕ್ಕೆ ಬಳಕೆಯಾಗಿತ್ತೋ ಎಂದರೆ ಸಾಕ್ಷಿ - ಹಾಡು ಕೇಳುವಾಗ ಚಾಸಾ-10 ರವರು ತಾಯಿ ಫೋನ್ ಕರೆ ಮಾಡಿದ್ದರು , ಆ ಸಮಯದಲ್ಲಿ 1 ನೇ ಆರೋಪಿ ಚಾಸಾ-10 ರವರಿಗೆ ಮೋಬೈಲ್ ಫೋನ್ ಕೊಟ್ಟಿದ್ದಾನೆ. ಆ ರೀತಿ ಹಾಡು ಕೇಳುವ ಮಧ್ಯದಲ್ಲಿ ಚಾಸಾ-10 ಎರಡು ಅಥವಾ ಮೂರು ಸಲ ಫೋನಿನಲ್ಲಿ ಮಾತನಾಡಲು ಬಳಸಿರಬಹುದು. ನಾನು ಸ್ಥಳ ಬಿಟ್ಟಾಗ ರಾತ್ರಿ ಸುಮಾರು 10-15 ಗಂಟೆಯಾಗಿತ್ತು. ಆ ಸ್ಥಳದಲ್ಲಿ ಆರೋಪಿತರಾದ ನಸರುಲ್ಲಾ ಮತ್ತು ಮನ್ಸೂರ್ ಅಲ್ಲೇ ಇದ್ದರು. ಉಳಿದವರೆಲ್ಲ ಆ ಸ್ಥಳವನ್ನು ಬಿಟ್ಟು ಹೋಗಿದ್ದಾರೆ. ಮನೆಗೆ ಬಂದ ನಂತರ ನೀವು 1 ನೇ ಆರೋಪಿಗಾಗಲಿ , 2 ನೇ ಆರೋಪಿಗಾಗಲಿ ಫೋನ್ ಮಾಡಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಅದೇ ರೀತಿ ಬೇರೆ ಯಾರಾದರೂ ಫೋನ್ ಮಾಡಿದ ಬಗ್ಗೆ ನಿಮಗೆ ಗೊತ್ತಾಯಿತಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. 1 ನೇಆರೋಪಿಯ ವಯಸ್ಸು ಸುಮಾರು 21 ವರ್ಷ ಇರಬಹುದು. ಮೃತನ ವಯಸ್ಸು ಸುಮಾರು 40 ರಿಂದ 45 ವರ್ಷ ಇರಬಹುದು. 1 ನೇ ಆರೋಪಿ ಮತ್ತು ಮೃತ ಸ್ನೇಹಿತರಾಗಿರುವುದಿಲ್ಲ. 1 ನೇ ಆರೋಪಿಯನ್ನು ನಾನು ಆತ ಸಣ್ಣವನಿದ್ದಾಗಿನಿಂದ ನೋಡುತ್ತಿದ್ದೇನೆ. ಸುಮಾರು ಎಂಟು ಹತ್ತು ವರ್ಷದಿಂದ ಆತನ ಸ್ನೇಹ ಇದೆ ಎಂದರೆ ಸಾಕ್ಷಿ - 1 ನೇ ಅರೋಪಿ ನನಗೆ ಸಾಧಾರಣ ಸ್ನೇಹವಾಗಿದ್ದಾನೆ. ಯಾವತ್ತಾದರೂ 1 ನೇ ಆರೋಪಿ ಮೃತನಿಗೆ ಕೆಟ್ಟದ್ದಾಗಿ ಮಾತನಾಡಿದ್ದನ್ನು ನೀವು ಕೇಳಿಕೊಂಡಿದ್ದೀರಾ ಎಂದರೆ ಸಾಕ್ಷಿ - ಕೇಳಿಸಿಕೊಂಡಿಲ್ಲ ಎಂದು ನುಡಿದಿದ್ದಾರೆ. ಅಂದರೆ 1 ನೇ ಆರೋಪಿ ನಿಮ್ಮ ಮುಂದೆ ಮೃತನ ಬಗ್ಗೆ ಕೆಟ್ಟದ್ದಾಗಿ ಮಾತನಾಡಿಲ್ಲ ಎಂದರೆ ಸಾಕ್ಷಿ - ಮಾತನಾಡಿಲ್ಲ ಎಂದು ನುಡಿದಿರುತ್ತಾರೆ.

ಹಬಿದ್ ಬಗ್ಗೆ ನಸರುಲ್ಲಾ ಕೆಟ್ಟದಾಗಿ ಮಾತನಾಡಿರುವುದು ನನಗೆ ಗೊತ್ತಿಲ್ಲ. ಹಬಿದ್ ಮತ್ತು ಮೃತ ಇಬ್ಬರು ಸಮ ವಯಸ್ಕರು. ಆ ಕಾರಣಕ್ಕೆ ಹಬಿದ್ ಸಹ ನಸರುಲ್ಲಾನ ಸ್ನೇಹಿತನಲ್ಲ ಎನ್ನುವುದು ಸರಿ. ಹಬಿದ್ ನನ್ನು ಒಂದು ಕೈ ನೋಡಿಕೊಳ್ಳಬೇಕು ಎಂದು ನನ್ನ ಮನಸ್ಸಿನಲ್ಲಿದೆ ಎಂದು 1 ನೇ ಆರೋಪಿ ನನ್ನ ಮುಂದೆ ಮಾತನಾಡಿಲ್ಲ.

ದಿ.17-03-2023 ರಂದು ಬೆಳಗಿನ 6-30 ರಿಂದ 7-00 ಗಂಟೆ ವರೆಗೆ ನಿಮಗೆ ವಿಷಯ ತಿಳಿಯಿತು ಎಂದು ಹೇಳಿದ್ದೀರಾ , ಯಾರಿಂದ ಗೊತ್ತಾಯಿತು ಎಂದರೆ ಸಾಕ್ಷಿ- ಮನೆಯವರಿಂದ ಗೊತ್ತಾಯಿತು ಎಂದು ನುಡಿದಿರುತ್ತಾರೆ. ಆ ನಂತರ ನಾನು ಗ್ಯಾರೇಜ್ ಗೆ ಹೋಗಬೇಕೆ ಎನ್ನುವ ಸಮಯದಲ್ಲಿ ಚಾಸಾ-10 ನನ್ನು ಕೇಳಿದೆ , ಆಗ ಆತ ನನಗೆ ಎಲ್ಲಾ ಹೇಳಿದ್ದಾನೆ. ಚಾಸಾ-10 ನನ್ನು ಬಿಟ್ಟು ಈ ವಿಷಯವನ್ನು ನಿಮಗೆ ಬೇರೆ ಯಾರು ಹೇಳಿಲ್ಲ ಎಂದರೆ ಸಾಕ್ಷಿ - ಹೇಳಿಲ್ಲ ಎಂದು ನುಡಿದಿರುತ್ತಾರೆ.

ಮೃತ ಫಾರುಕ್ ಮತ್ತು ಹಬಿದುಲ್ಲಾ ಇಬ್ಬರು ಸುಮಾರು ಮೂರ್ನಾಲ್ಕು ವರ್ಷದಿಂದ ಹೊಲ್ ಸೇಲ್ ಹಣ್ಣಿನ ವ್ಯಾಪಾರ ಮಾಡುತ್ತಿದ್ದರು ಎನ್ನುವುದು ಸರಿ. ಅವರಿಬ್ಬರ ಸಂಪಾದನೆ ಚನ್ನಾಗಿತ್ತು ಎಂದರೆ ಸಾಕ್ಷಿ - ಅವರ ಬಗ್ಗೆ ನನಗೆ ಡಿಟೇಲ್ಸ್ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸಂಪಾದನೆಯ ವಿಚಾರದಲ್ಲಿ ಮೃತ ಫಾರುಕ್ ಮತ್ತು ಹಬಿದುಲ್ಲಾ ರವರ ಮಧ್ಯ ವೈ ಮನಸ್ಸು ಬೆಳೆದಿತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಫಾರುಕ್ ಉಲ್ಲಾನು ಹಬಿದ್ ನನ್ನು ಮುಗಿಸಬೇಕೆನ್ನುವ ಮತ್ತು ಹಬಿದುಲ್ಲಾನು ಫಾರುಕ್‌ನನ್ನು ಮುಗಿಸಬೇಕೆನ್ನುವ ವಿಚಾರ ಇತ್ತು ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ನುಡಿದಿದ್ದಾರೆ.

ದಿ.16-03-2023 ರಂದು ಅಪರಾತ್ರಿ ವೇಳೆಯಲ್ಲಿ ಫರುಕ್ ವುಲ್ಲಾ ರವರು ಹೊಳೆ ದಂಡೆ ಹತ್ತಿರ ಹೋಗಿದ್ದಾರೆ ಎನ್ನುವುದು ಮತ್ತು ಹಬಿದ್ ಉಲ್ಲಾ ಸಹ ಅಲ್ಲಿಗೆ ಹೋಗಿದ್ದರು ಎಂದರೆ ಸಾಕ್ಷಿ - ನಾನು ಅಲ್ಲಿ ಇರಲಿಲ್ಲ ಎಂದು ನುಡಿದಿರುತ್ತಾರೆ. ಅವರಿಬ್ಬರ ಮಧ್ಯ ಹೊಳೆ ದಂಡೆಯಲ್ಲಿ ಜಗಳವಾಗಿ ಮೃತ ಫಾರುಕ್ ಕುಡಿದಮತ್ತಿನಲ್ಲಿ ಒಡೆದ ಬಾಟಲ್ ಗಳ ಮೇಲೆ ಬಿದ್ದು, ಎಡ ಕತ್ತಿನ ಮೇಲೆ ಗಾಯವಾಗಿತ್ತು , ಅಮಲಿನಲ್ಲಿ ತಿರುಗಿದ್ದರಿಂದ ಆತನ ಬೆನಿನಗೆ ಬಾಟಲ್ ನಿಂದ ಚುಚ್ಚಿದ ಗಾಯವಾಗಿತ್ತು ಎಂದರೆ ಸಾಕ್ಷಿ - ಚಾಕುವಿನಿಂದ ಇರಿದಿದ್ದಾರೆ ಎಂದು ಚಾಸಾ-10 ನನಗೆ ತಿಳಿಸಿದ್ದಾನೆ ಎಂದು ನುಡಿದಿರುತ್ತಾರೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಚಾಸಾ-10 ಮತ್ತು 19 ರವರು ಸೇರಿ ಚಾಸಾ-9 ಹಬಿದ್ ಗೆ ಸಹಾಯ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

ದಿ.16-03-2023 ರಂದು ನಸರುಲ್ಲಾ ರವರು ಚಾಸಾ-10 ರ ಮೋಬೈಲ್ ಪಡೆದಿಲ್ಲ

ಎನ್ನುವುದು ಸರಿಯಲ್ಲ. ಪಾರ್ಟಿ ನಡೆಯುವಾಗ ಸಾಂಗ್ ಕೇಳಲು ಮೋಬೈಲ್ ಪಡೆದಿದ್ದಾನೆ ಎಂದು ಸಾಕ್ಷಿ ನುಡಿದಿದ್ದಾರೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಅದನ್ನು ನೋಡಿದ್ದೇನೆ ಎಂದು ನುಡಿದಿರುತ್ತಾರೆ. ದಿ.16-03-2023 ರಂದು ಬೆಳಗಿನಿಂದ ರಾತ್ರಿ ವರೆಗೆ ಚಾಸಾ-10 ರವರ ಮೊಬೈಲ್ ಅತನಬಳಿಯೇ ಇತ್ತು ಎಂದರೆ - ನನಗೆ ಗೊತ್ತಿಲ್ಲ , ಆದರೆ ರಾತ್ರಿ ಪಾರ್ಟಿಗೆ ಹೋದಾಗ ಚಾಸಾ-10 ರವರ ಬಳಿ ಮೋಬೈಲ್ ಇತ್ತು ಎಂದು ಸಾಕ್ಷಿ ನುಡಿದಿರುತ್ತಾರೆ. ಅದು ಯಾವ ಕಂಪನಿಯ ಮೋಬೈಲ್ ಎಂದು ನನಗೆ ಗೊತ್ತಿಲ್ಲ. ಆ ಮೋಬೈಲ್ ನಂಬರ್ ನನಗೆ ಗೊತ್ತಿಲ್ಲ. ಆ ಮೋಬೈಲ್ ಯಾವ ಕಲರ್ ನ ಮೋಬೈಲ್ ಎಂದು ಸಹ ಗೊತ್ತಿಲ್ಲ.

ಚಾಸಾ-10 ಮತ್ತು 19 ರವರು ಚಾಸಾ-9 ರವರಿಗೆ ಸಹಾಯ ಮಾಡಿದ್ದರಿಂದ ಫಾರುಕ್ ಉಲ್ಲಾನ ಕೊಲೆಯಾಗಿದೆ , ನಾನು ಚಾಸಾ-10 ಮತ್ತು 19 ರವರನ್ನು ಉಳಿಸುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಎನ್ನುವುದು ಸರಿಯಲ್ಲ.

ಚಾಸಾ-10 ನನಗೆ ವಿಷಯ ಹೇಳಿದಾಗ ನಾನು ಒಬ್ಬನೇ ಇದ್ದೆ. ಆ ಸಮಯದಲ್ಲಿ ಚಾಸಾ-10 ಮೂರ್ನಾಲ್ಕು ಜನರ ಬಳಿ ಮಾತನಾಡುತ್ತಿದ್ದ. ಅವರೂ ಸಹ ಫಾರುಕ್ ಉಲ್ಲಾನ ಸಾವಿನ ಸಂಬಂಧ ಮಾತನಾಡುತ್ತಿದ್ದರಾ ಎಂದರೆ ಸಾಕ್ಷಿ ಹೌದು ಎಂದು ನುಡಿದಿದ್ದಾರೆ. ಚಾಸಾ-10 ಸೃಷ್ಟಿಸಿದ ಕತೆಗೆ ನಾನು ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.94/2023

PW- 04

CW- 13

ಪ್ರ. ಬೋ. ದಿನಾಂಕಃ 04-01-2024

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಮುಬಾರಕ್ |
| ತಂದೆ/ಗಂಡನ ಹೆಸರು | : | ಸಾಬಿರ್ ಅಹ್ಮದ್ |
| ವಯಸ್ಸು | : | 21 ವರ್ಷ |
| ಉದ್ಯೋಗ | : | ಗ್ಯಾರೇಜ್ ಕೆಲಸ |
| ವಾಸ | : | ಹೊನ್ನಾಳಿ |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಚಾಸಾ.9 ರಿಂದ 12, 14 ರಿಂದ 19 ನನಗೆ ಗೊತ್ತು. ಈ ಪ್ರಕರಣದ ಆರೋಪಿತರು ನನಗೆ ಗೊತ್ತು. ಅವರೆಲ್ಲ ನನಗೆ ಸ್ನೇಹಿತರಾಗಿರುತ್ತಾರೆ. ಮೃತ ಫಾರುಕ್ ಉಲ್ಲಾ ನನಗೆ ಗೊತ್ತು.

ದಿ.16-03-2023 ರಂದು ರಾತ್ರಿ 8-30 ಗಂಟೆ ಸುಮಾರಿಗೆ ಗೊಲ್ಲರಹಳ್ಳಿಯ ಹೊಳೆ ದಂಡೆ ಹತ್ತಿರ 2 ನೇ ಆರೋಪಿ ಮನ್ಸೂರ್ ನ ಬರ್ತಡೇ ಪಾರ್ಟಿ ಮಾಡಲು ನಾನು, ಮನ್ಸೂರ್ , ನಸರುಲ್ಲಾ , ತನ್ವಿರ್ , ಇರ್ಶಾದ್ , ಅಮ್ಮು ಖಲಂದರ್ , ತರಕಾರಿ ಖಲಂದರ್, ಮೋಟರ್ ಖಲಂದರ್ , ಖಲಂದರ್ ಜಮೀರ್ , ಹೋಗಿದ್ದೇವು. ನಾವು ರಾತ್ರಿ 8-30 ಗಂಟೆ ಸುಮಾರಿಗೆ ಕೇಕ್ ಕಟ್ ಮಾಡಿ , ಚಿಕನ್ ಬಿರಿಯಾನಿ ಪಾರ್ಸಲ್ ತೆಗೆದುಕೊಂಡು ಹೋಗಿದ್ದನ್ನು ತಿಂದೆವು, ಎಲ್ಲರೂ ಸೇರಿ ಊಟ ಮಾಡಿದ್ದೇವೆ.

ಊಟ ಮಾಡುವ ಸಮಯದಲ್ಲಿ ಸಾಂಗ್ ಕೇಳುವ ಉದ್ದೇಶದಿಂದ 1 ನೇ ಆರೋಪಿ ಖಲಂದರ್ ಜಮೀರ್ ನ ಮೋಬೈಲ್ ಫೋನ್ ನನ್ನು ಸಾಂಗ್ ಕೇಳಲು ಪಡೆದುಕೊಂಡಿದ್ದ. ಊಟ ಆದ ಮೇಲೆ ಖಲಂದರ್ ಜಮೀರ್ ನು 1 ನೇ ಆರೋಪಿಯನ್ನು ನನ್ನ ಮೋಬೈಲ್ ಕೊಡು ಎಂದು ಕೇಳಿದ. ಆತ ಬೆಳಿಗ್ಗೆ ಕೊಡುತ್ತೇನೆ ಎಂದು ಹೇಳಿದ. ಅದಕ್ಕೆ ಖಲಂದರ್

ಜಮೀರ್ ನನಗೆ ಬೇಕೆ ಬೇಕು ಕೊಡು ಎಂದು 1 ನೇ ಆರೋಪಿಯನ್ನು ಕೇಳಿದ. ಅದಕ್ಕೆ 1 ನೇ ಆರೋಪಿ ಬೆಳಿಗ್ಗೆ ಕೊಡುತ್ತೇನೆ ಎಂದು ಸತಾಯಿಸಿದ. ಆದರೂ ಸಹ ಚಾಸಾ-10 ನಮ್ಮ ಅಪ್ಪ ಬೈಯ್ಯುತ್ತಾರೆ ನಾನು ಮನೆಗೆ ಹೋಗಬೇಕು ಕೊಡು ಎಂದು ಪುನಃ 1 ನೇ ಆರೋಪಿಯನ್ನು ಕೇಳಿದ. ಆದರೂ ಸಹ 1 ನೇ ಆರೋಪಿ ಕೊಡುವುದಿಲ್ಲ, ಬೆಳಿಗ್ಗೆ ಕೊಡುತ್ತೇನೆ ಎಂದು ಹೇಳಿದ . ಆ ನಂತರ ನಾನು , ಮುಬಾರಕ್ , ಇರ್ಶದ್ , ಅಮ್ಮು ಖಲಂದರ್ , ತರಕಾರಿ ಖಲಂದರ್ , ಸುಹೇಲ್ , ಸುಲೇಮಾನ್ ಎಲ್ಲರೂ ನಮ್ಮ ನಮ್ಮ ಮನೆಗೆ ಹೋಗಿರುತ್ತೇವೆ.

ಮಾರನೇ ದಿನ ಶುಕ್ರವಾರ ಬೆಳಿಗ್ಗೆ6-00 ಗಂಟೆಗೆ ಆರೋಪಿತರು ಫಾರುಕ್ ಅಹ್ಮದ್ ನನ್ನು ಚಾಕುವಿನಿಂದ ಕೊಲೆ ಮಾಡಿದ್ದಾರೆ ಎಂದು ಗೊತ್ತಾಯಿತು.

ಬಿಎಸ್ ಎನ್ ಎಲ್ ಕಛೇರಿ ಬಳಿ ಫಾರುಕ್ ಮತ್ತು ಹಬಿದ್ ವುಲ್ಲಾ ಇದ್ದಾಗ ಚಾಸಾ-10 ಹಾಗೂ ಆತನ ತಂದೆ ಚಾಸಾ-19 ಅಲ್ಲಿಗೆ ಹೋಗಿ , ಫಾರುಕ್ ಮತ್ತು ಹಬಿದುಲ್ಲಾ ನಿಗೆ ನನ್ನ ಮಗನ ಮೋಬೈಲ್ ಕೊಡಿಸಿ ಎಂದು ಹೇಳಿದ್ದು , ಆಗ ಚಾಸಾ-10, ಸದರಿ ಫಾರುಕ್ ಮತ್ತು ಹಬಿದುಲ್ಲಾ ರವರನ್ನು ಹೊಳೆ ದಂಡೆ ಹತ್ತಿರ ಕರೆದುಕೊಂಡು ಹೋಗಿದ್ದು , ಫಾರುಕ್ ನು 1 ನೇ ಆರೋಪಿಗೆ ಚಾಸಾ-10 ರವರ ಮೋಬೈಲ್ ಕೊಡು ಎಂದು ಕೇಳಿದಾಗ , ಆತ ಇಲ್ಲ ಕೊಡುವುದಿಲ್ಲ ಎಂದು ಬೈದು , ಅವರ ಮಧ್ಯ ಗಲಾಟೆಯಾಗಿ ಚಾಕುವನ್ನು ಹಾಕಿ ಫಾರುಕ್ ನ ಕೊಲೆ ಮಾಡಿದ್ದಾರೆ ಎಂದು ಗೊತ್ತಾಯಿತು. ಹಬಿದ್ ನಿಗೂ ಸಹ ಕೈ ಯಿಂದ ಮುಖಕ್ಕೆ ಹೊಡೆದಿದಾದರೆ ಎಂದು ಗೊತ್ತಾಯಿತು.

ಆ ದಿನ ಬರ್ತ್ ಡೇ ಪಾರ್ಟಿಯಲ್ಲಿ ಉಪಯೋಗಿಸಿದ ವಸ್ತುಗಳು ಎಂದು ಮು.ಮಾ.4 ಮತ್ತು 5 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀಸವಾಲುಃ-</u> ಆರೋಪಿ ಪರ ಶ್ರೀ ಎಸ್ ಎಂ ಎಲ್ ವಕೀಲರಿಂದ.

ಪೊಲೀಸರು ನನ್ನ ಮನೆಯ ಬಳಿ ಬಂದಾಗ ನನ್ನನ್ನು ವಿಚಾರಣೆ ಮಾಡಿದ್ದಾರೆ. ಪೊಲೀಸರು ನಾನು ಹೇಳಿದ್ದನ್ನು ಬರೆದುಕೊಂಡಿಲ್ಲ. ಬರ್ತ್ಡೇ ಪಾರ್ಟಿಗೆ ಕ್ಯಾಂಡಲ್ ಮತ್ತು ಪೇಪರ್ ಶಾರ್ಟ್ಸ್ ತಂದಿದ್ದರು ಎಂದು ಪೊಲೀಸರ ಮುಂದೆ ಹೇಳಿದ್ದೇನೆ. ಮು,ಮಾ.4 ಮತ್ತು 5 ನ್ನು ಪೊಲೀಸರು ನನ್ನ ಎದುರು ತೆಗೆದುಕೊಂಡಿರುವುದಿಲ್ಲ. ಬರ್ತ್ ಡೇ ಪಾರ್ಟಿ ಹೊಳೆ

ದಂಡೆಯ ಹತ್ತಿರ ನಡೆದಿರುತ್ತದೆ. ಬರ್ತ್ ಡೇ ಪಾರ್ಟಿ ಮಾಡಿದ ಜಾಗ ಹೊಳೆದಂಡೆಯಿಂದ ಸುಮಾರು 15 ಅಡಿ ದೂರದಲ್ಲಿರುತ್ತದೆ. ಬರ್ತ್ಡೇ ಪಾರ್ಟಿ ಕೇಕನ್ನು ಯಾರು ತಂದಿದ್ದಾರೆ ಎಂದು ನಾನು ನೋಡಿಲ್ಲ. ಬರ್ತ್ ಡೇ ಪಾರ್ಟಿ ಕೇಕ್ ಗೆ ಎಲ್ಲಿ ಆರ್ಡರ್ ಕೊಟ್ಟಿದ್ದರು ಎಂದು ಗೊತ್ತಿಲ್ಲ. ಸದರಿ ಕೇಕ್ ಪೇಸ್ಟ್ರಿ ಕೇಕೋ ನಾರ್ಮಲ್ ಕೇಕೋ ಎಂದರೆ ಸಾಕ್ಷಿ ಪೇಸ್ಟ್ರೀ ಕೇಕ್ ಎಂದು ನುಡಿದಿರುತ್ತಾರೆ. ಕೇಕ್ ಬಿಳಿ ಕಲರ್ ದು ಇತ್ತು , ಆದರೆ ಯಾವ ವಿಧದ ಕೇಕ್ ಆಗಿತ್ತು ಎಂದು ಗೊತ್ತಿಲ್ಲ. ಕೇಕ್ ತಂದಾಗ ರಾತ್ರಿ 8-30 ಗಂಟೆಯಾಗಿತ್ತು. ಆ ದಿನ ಪಾರ್ಟಿಗಾಗಿ ಕೇಕ್ , ಚಿಕನ್ ಬಿರಿಯಾನಿ ತರಿಸಿದ್ದೇವು. ಒಂದು ಫುಲ್ ಬಾಟಲ್ ತರಿಸಿದ್ದೇವು. ಫುಲ್ ಬಾಟಲ್ ನಲ್ಲಿ ವಿಸ್ಕಿ ಇರಬಹುದು. ಫುಲ್ ಬಾಟಲ್ ವಿಸ್ಕಿಗೆ ಮಿಕ್ಸ ಮಾಡಲು ಏನು ತಂದಿದ್ದರು ಎಂದರೆ ಸಾಕ್ಷಿ ನೀರು ತಂದಿದ್ದರು ಎಂದು ನುಡಿದಿದ್ದಾರೆ. ಫುಲ್ ಬಾಟಲ್ ನ್ನು ಖಾಲಿ ಮಾಡಿದವರು ಯಾರು ಎಂದರೆ ಸಾಕ್ಷಿ - ಮೂರ್ನಾಲ್ಕು ಜನ ರನ್ನುಬಿಟ್ಟು ಆ ದಿನ ಉಳಿದವರು ಒಂದು ಫುಲ್ ಬಾಟಲನ್ನು ಕುಡಿದಿದ್ದಾರೆ. ಆ ದಿನ ನಾನೂ ಸಹ ಕುಡಿದಿದ್ದೆ. ಸಾಕ್ಷಿಗೆ ಒಬ್ಬೊಬ್ಬರು ಎಷ್ಟು ಲಾರ್ಜ ನ್ನು ಕುಡಿದಿದ್ದರು ಎಂದರೆ ಸಾಕ್ಷಿ - ತಮ್ಮ ಎರಡು ಬೆರಳುಗಳ ಮೂಲಕ ಸುಮಾರು ಒಂದುವರೆ ಇಂಚಿನಷ್ಟು ಅಳತೆಯ ವಿಸ್ಕಿಯನ್ನು ಎರುಡು ಬಾರಿ ಕುಡಿದಿದ್ದಾಗಿ ನುಡಿದಿರುತ್ತಾರೆ.

ನಾನು 2016 ರಲ್ಲಿ ಮಧ್ಯ ಸೇವನೆ ಪ್ರಾರಂಭ ಮಾಡಿದ್ದೇನೆ. ಒಂದು ಲಾರ್ಜ್ ವಿಸ್ಕಿ ಕುಡಿದರೆ , ಒಂದು ಲಾರ್ಜ ರಮ್ ಕುಡಿದರೆ ವ್ಯತ್ಯಾಸ ಇದೆ ಎಂದರೆ ಸಾಕ್ಷಿ - ವ್ಯತ್ಯಾಸವಾಗುವುದಿಲ್ಲ ಎಂದು ನುಡಿದಿದ್ದಾರೆ. ಒಂದು ಲಾರ್ಜ ವಿಸ್ಕಿಯನ್ನು ನೀರನ್ನು ಬೆರೆಸಿ ಕುಡಿಯಲು ನಿಧಾನವಾಗಿ ಕುಡಿಯಬೇಕು , ಆ ರೀತಿ ಕುಡಿದರೆ ಅದರ ನಿಶೆ ಏರುತ್ತದೆ ಎಂದರೆ - ನಿಧಾನವಾಗಿ ಕುಡಿಯಬೇಕು , ಅಷ್ಟು ಕುಡಿದರೆ ನಿಶೆ ಏರುವುದಿಲ್ಲ. ನಿಶೆ ಏರಬೇಕಾದರೆ ಫುಲ್ ಬಾಟಲ್ ಕುಡಿಯಬೇಕು ಎಂದು ನುಡಿದಿದ್ದಾರೆ. ನಿಧಾನವಾಗಿ ಕುಡಿಯಬೇಕು ಎಂದರೆ ಸಾಕ್ಷಿ - ನಿಧಾನಕ್ಕೆ ಕುಡಿಯಬೇಕು ಎನ್ನುವುದು ಸರಿ. ರಮ್ ಗಿಂತ ವಿಸ್ಕಿಯ ಹ್ಯಾಂಗ್ ಓವರ್ ಬಹಳ ಹೊತ್ತು ಇರುತ್ತದೆ ಎಂದರೆ ಸಾಕ್ಷಿ - 24 ಗಂಟೆ ಇರುತ್ತದೆ ಎಂದು ನುಡಿಯುತ್ತಾರೆ. ಬೆಳಗಿನ ವರೆಗೆ ಇರುತ್ತದೆ ಎಂದು ನುಡಿದಿರುತ್ತಾರೆ.

ಕೇಕ್ ಕಟ್ ಮಾಡಿದ ನಂತರ ಕುಡಿಯಲು ಪ್ರಾರಂಭ ಮಾಡಿದ್ದೇವೆ. ಎಲ್ಲರೂ ಸೇರಿಫುಲ್ ಬಾಟಲ್ ಕುಡಿಯಲು ಸುಮಾರು ಎರಡು ತಾಸು ಆಗಿರುತ್ತದಾ ಎಂದರೆ ಸಾಕ್ಷಿ ಇಲ್ಲ ಸುಮಾರು ಅರ್ಧ ತಾಸು ಆಗಿರುತ್ತದೆ ಎಂದು ನುಡಿದಿರುತ್ತಾರೆ. ಯಾರು ಯಾರು

ಕುಡಿಯಲಿಲ್ಲ ಎನ್ನುವವರನ್ನುನಾನು ಗಮನಿಸಿರುವುದಿಲ್ಲ.

ನೀವು ಮನೆಗೆ ಹೋದಗ ಎಷ್ಟು ಗಂಟೆಯಾಗಿತ್ತು ಎಂದರೆ ಸಾಕ್ಷಿ ರಾತ್ರಿ 10-30 ಗಂಟೆಯಾಗಿರಬಹುದು ಎಂದು ನುಡಿದಿರುತ್ತಾರೆ. ನೀವು ಹೋದ ಪ್ರದೇಶ ಸಂಪೂರ್ಣ ನಿರ್ಜನ ಪ್ರದೇಶ , ಯಾರು ಇರುವುದಿಲ್ಲ ಎಂದರೆ ಸಾಕ್ಷಿ - ಕರಬುಜ್ ಹಣ್ಣು ಮಾರಾಟ ಮಾಡುವವರು ಬರುತ್ತಿದ್ದರು , ಹೋಗುತ್ತಿದ್ದರು ಎಂದು ನುಡಿದಿರುತ್ತಾರೆ. ನಾವು ಪಾರ್ಟಿ ಮಾಡಿದ ಜಾಗದಿಂದ ಸುಮಾರು 20 ಅಡಿ ದೂರದಲ್ಲಿ ಕರಬೂಜ ಹಣ್ಣಿನ ಬೆಳೆ ಇತ್ತು , ಆ ಸ್ಥಳಕ್ಕೆ ಜನ ಬಂದು ಹೋಗುತ್ತಿದ್ದರು. ನಾವು ಇದ್ದಾಗ ಬೇರೆಯವರು ಯಾರು ಬಂದಿರಲಿಲ್ಲ. ಪೊಲೀಸರ ಮುಂದೆ ಕರಬೂಜ್ ಹಣ್ಣಿನ ತೋಟ ಇದೆ , ಅಲ್ಲಿಗೆ ಜನ ಬಂದು ಹೋಗಿ ಮಾಡುತ್ತಿದ್ದರು ಎಂದು ನಾನು ಹೇಳಿಲ್ಲ.

ಖಲಂದರ್ ನ ಫೋನ್ ಯಾವ ಕಂಪನಿಯ ಫೋನ್ ಎಂದು ನಾನು ನೋಡಿಲ್ಲ.

ಪ್ರಶ್ನೆ:- ಖಲಂದರ್ ಜಮೀರ್ ನ ಫೋನನ್ನು ಪಡೆದುಕೊಂಡರು ಎಂದು ಹೇಳಿದ್ದೀರಾ , ಆಗ ಸಮಯ ಎಷ್ಟು ಆಗಿತ್ತು ?

ಉತ್ತರ:- ಮೊದಲು ನಾನು ಅಲ್ಲಿ ಇರಲ್ಲಿ ಎಂದು ನುಡಿದು, ನಂತರ ಆಗ ರಾತ್ರಿ 9-30 ನೋ 8-30 ಆಗಿತ್ತು ಎಂದು ನುಡಿದಿರುತ್ತಾರೆ.

ನೀವು ನೋಡಿದಂತೆ ನಸರುಲ್ಲಾ ಫೊನ್ ಪಡೆದುಕೊಂಡಿದ್ದು ಕೇವಲ ಹಾಡು ಕೇಳಲು ಪಡೆದುಕೊಂಡಿದ್ದಾನೋ , ಅಥವಾ ಬೇರೆ ಉಪಯೋಗಕ್ಕೆ ಪಡೆದುಕೊಂಡಿದ್ದನೋ ಎಂದರೆ ಸಾಕ್ಷಿ - ಹಾಡುಕೇಳಲು ಮಾತ್ರ ಪಡೆದಿದ್ದ ಎಂದು ನುಡಿದಿರುತ್ತಾರೆ.

ಪ್ರಶ್ನೆ:- ನೀವು ಸ್ಥಳದಲ್ಲಿ ಇದ್ದಷ್ಟು ಹೊತ್ತು ಆ ಫೋನಿಗೆ ಯಾವುದೇ ಕರೆ ಬಂದಿಲ್ಲ ಮತ್ತು ಕರೆಯನ್ನು ಯಾರು ಅಟೆಂಡ್ ಮಾಡಿಲ್ಲ ?
ಉತ್ತರ ಃ- ಕೇಕ್ ಕಟ್ ಮಾಡುವಾಗ , ಪಾರ್ಟಿ ಮಾಡುವಾಗ ಫೋನ್ ಬಂದಿಲ್ಲ ಎಂದು ನುಡಿದಿದ್ದಾರೆ.

ಪ್ರಶ್ನೆ:- ನೀವು ಸೇರಿದ್ದ ಎಲ್ಲಾ ಸ್ನೇಹಿತರ ಬಳಿ ಸ್ಮಾರ್ಟ್ ಫೋನ್ ಇತ್ತಾ ?
ಉತ್ತರ:- ಕೆಲವರ ಬಳಿ ಇತ್ತು , ಕೆಲವರ ಬಳಿ ಇರಲಿಲ್ಲ.

ಪ್ರಶ್ನೆ:- ಹೊನ್ನಾಳಿ ಬಸ್ ನಿಲ್ದಾಣ ಆ ಸ್ಥಳದಿಂದ ಎಷ್ಟು ದೂರದಲ್ಲಿದೆ ?
ಉತ್ತರ:- ಎಂಟು ಕಿ.ಮೀ. ಆಗಬಹುದು .

ಪ್ರಶ್ನೆ:- ಆ ಸ್ಥಳದಿಂದ ಗೊಲ್ಲರ ಹಳ್ಳಿ ಎಷ್ಟು ದೂರ ಇದೆ?

ಉತ್ತರ:- ಎರಡು ಕಿ.ಮೀ ದೂರ ಆಗುತ್ತದೆ.

ಪ್ರಶ್ನೆ:- ಆ ಸ್ಥಳದಲ್ಲಿ ಹೊನ್ನಾಳಿ ಮುನ್ಸಿಪಾಲಿಟಿಯವರು ಅಥವಾ ಗೊಲ್ಲರಹಳ್ಳಿ ಗ್ರಾಮ ಪಂಚಾಯಿತಿಯವರು ಯಾವುದೇ ಲೈಟ್ ಹಾಕಿಸಿಲ್ಲ?

ಉತ್ತರ:- ಒಂದು ಲೈಟ್ ಒಂದು ಮನೆ ಯ ರಸ್ತೆಯ ಪಕ್ಕ ಇದೆ .

ಪ್ರಶ್ನೆ:- ಆ ಮನೆ ನೀವು ಇದ್ದ ಸ್ಥಳದಿಂದ ಎಷ್ಟು ದೂರ ಇತ್ತು ?
ಉತ್ತರ:- ಎರಡು ಕಿ.ಮೀ ದೂರದಲ್ಲಿತ್ತು.

ಪ್ರಶ್ನೆ:- ಆ ದಿನ ಫೋಟೋ ಮತ್ತು ವಿಡಿಯೋಗಳನ್ನು ತೆಗೆದಿದ್ದೀರಾ ?
ಉತ್ತರ:- ತೆಗೆದಿದ್ದಾರೆ.

ಪ್ರಶ್ನೆ:- ಫೋಟೋ ಮತ್ತು ವಿಡಿಯೋ ತೆಗೆದಿದ್ದಾರೆ ಎಂದು ಪೊಲೀಸರ ಮುಂದೆ ಹೇಳಿದ್ದೀರಾ?
ಉತ್ತರ:- ನಾನು ಹೇಳಿರುವುದಿಲ್ಲ ಎಂದು ನುಡಿದಿದ್ದಾರೆ.

ಪ್ರಶ್ನೆ:- ಫೋಟೋ ಮತ್ತು ವಿಡಿಯೋ ತೆಗೆದಿದ್ದಾರೆ ಎಂದು ಪೊಲೀಸರ ಮುಂದೆ ಹೇಳಲು ತೊಂದರೆ ಇತ್ತಾ?
ಉತ್ತರ:- ತೊಂದರೆ ಇರಲಿಲ್ಲ ಎಂದು ನುಡಿದಿದ್ದಾರೆ.

ಪ್ರಶ್ನೆ:- ಮರು ದಿನ ಬೆಳಿಗ್ಗೆ 6-00 ಗಂಟೆಗೆ ವಿಷಯ ಗೊತ್ತಾಯಿತು ಎಂದು ಹೇಳಿದ್ದೀರಾ , ಯಾವ ರೀತಿ ಗೊತ್ತಾಯಿತು?

ಉತ್ತರ:- ಜಮೀರ್ ಖಲಂದರ್ ನನಗೆ ಹೇಳಿದ್ದಾನೆ .

ಪ್ರಶ್ನೆ:- ಫೋನ್ ಮಾಡಿದ್ದರಾ ?
ಉತ್ತರ:- ನಮ್ಮ ಮನೆ ಹತ್ತಿರ , ಕೇರಿ ಹತ್ತಿರ ಆ ರೀತಿ ಹೇಳಿದ್ದಾನೆ.

ಪ್ರಶ್ನೆ:- ನಿಮ್ಮ ಮನೆಗೆ ಮತ್ತು ಜಮೀರ್ ಖಲಂದರ್ ಮನೆಗೆ ಎಷ್ಟು ದೂರ ಆಗುತ್ತದೆ?
ಉತ್ತರ:- ಆರು ಕಿ.ಮಿ. ದೂರ ಆಗುತ್ತದೆ.

ಪ್ರಶ್ನೆ:- ಜಮೀರ್ ಖಲಂದರ್ ಬಂದು ನಿಮ್ಮ ಕೇರಿ ಹತ್ತಿರ ಹೇಳಿದ ಸಮಯದಲ್ಲಿ ಎಷ್ಟು ಜನ ಸೇರಿದ್ದರು?

ಉತ್ತರಃ- ನಾನು , ನನ್ನ ತಮ್ಮ ಅಮ್ಮು ಖಲಂದರ್ ಇದ್ದೇವು ಎಂದು ನುಡಿದಿದ್ದಾರೆ.

ಪ್ರಶ್ನೆಃ- ನಿಮಗೆ ವಿಷಯ ತಿಳಿಸಿದಾಗ ನಿಮ್ಮ ತಮ್ಮ ಅಮ್ಮು ಖಲಂದರ್ ಇದ್ದ ಎಂದು ಪೊಲೀಸರ ಮುಂದೆ ಹೇಳಿದ್ದೀರಾ?

ಉತ್ತರಃ- ಹೇಳಿಲ್ಲ .

ಪ್ರಶ್ನೆಃ- ರಾತ್ರಿಯೇ ಈ ವಿಷಯ ಯಾಕೆ ತಿಳಿಸಲಿಲ್ಲ ಎಂದು ನೀವು ಚಾಸಾ-10 ರವರನ್ನು ಕೇಳಿದ್ದೀರಾ?
ಉತ್ತರಃ- ನಾನು ಕೇಳಿದೆ , ಆತ ನಾನು ಬಿಸಿಯಿದ್ದೆ , ಆದ್ದರಿಂದ ಹೇಳಿಲ್ಲ ಎಂದು ಸಾಕ್ಷಿ ನುಡಿದಿದ್ದಾರೆ.

ಪ್ರಶ್ನೆಃ- ಬಿ ಎಸ್ ಎನ್ ಎಲ್ ಕಛೇರಿ ಬಳಿಯಿಂದ ಯಾವ ರೀತಿ ಹೋಗಿದ್ದಾರೆ ಎಂದು ಗೊತ್ತಾಯಿತು?
ಉತ್ತರಃ- ಬೈಕಿನಲ್ಲಿ ಹೋಗಿದ್ದಾರೆ .

ಪ್ರಶ್ನೆಃ- ಬೈಕ್ ಯಾರದು ?
ಉತ್ತರಃ- ಗೊತ್ತಿಲ್ಲ.

ಪ್ರಶ್ನೆಃ- ಆ ದಿನ ಎಷ್ಟು ಚಾಕು ಉಪಯೋಗಿಸಿದ್ದಾರೆ ಎಂದು ಹೇಳಿದ್ದರಾ ?
ಉತ್ತರಃ- ಹೇಳಿಲ್ಲ.

ಪ್ರಶ್ನೆಃ- ಕತ್ತಿನ ಭಾಗದ ಬಳಿ ಚುಚ್ಚಿದವನು ಯಾರು , ಬೆನ್ನಿಗೆ ಚುಚ್ಚಿದವನು ಯಾರು ಎಂದು ಹೇಳಿದ್ದಾರಾ?
ಉತ್ತರಃ- ಕತ್ತಿನ ಭಾಗಕ್ಕೆ ನಸರುಲ್ಲಾ ಚುಚ್ಚಿದ್ದಾನೆ , ಬೆನ್ನಿನಭಾಗಕ್ಕೆ ಮನ್ಸೂರ್ ಚುಚ್ಚಿದ್ದಾನೆ .

ಪ್ರಶ್ನೆಃ- ಖಲಂದರ್ ಜಮೀರ್ ನ ಮೋಬೈಲ್ ಏನಾಯಿತು ಎಂದು ಗೊತ್ತಾಯಿತಾ?
ಉತ್ತರಃ- ಗೊತ್ತಾಗಲಿಲ್ಲ.

ಪ್ರಶ್ನೆಃ- ಆ ದಿನ ನಿಮ್ಮ ಕೇರಿ ಹತ್ತಿರ ವಿಷಯ ತಿಳಿಸಲು ಚಾಸಾ-10 ಒಬ್ಬನೇ ಬಂದಿದ್ದನೊ, ಅಥವಾ ಅವನ ಜೊತೆ ಬೇರೆ ಯಾರಾದರೂ ಬಂದಿದ್ದರಾ ?
ಉತ್ತರಃ- ಚಾಸಾ-10 ಖಲಂದರ್ ಒಬ್ಬನೇ ಬಂದಿದ್ದಾನೆ.

ಮೃತ ಫಾರುಕ್ ಮತ್ತು ಗಾಯಾಳು ಚಾಸಾ-9 ಹಬಿದ್ ರವರು ಹೊಲ್ ಸೇಲ್ ಹಣ್ಣು ವ್ಯಾಪಾರ ಮಾಡುತ್ತಿದ್ದರು ಎಂದರೆ ಸಾಕ್ಷಿ - ಅದು ನನಗೆ ಸರಿಯಾಗಿ ಗೊತ್ತಿಲ್ಲ , ಮಾಡುತ್ತಿದ್ದರು ಇಲ್ಲವೋ ಎಂದು ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನಸರುಲ್ಲಾ ಮತ್ತು ಫಾರುಕ್ ರವರಿಗೆ ಯಾವುದೇ ರೀತಿಯ ಸಂಬಂಧವಿಲ್ಲ ಎಂದರೆ ಸಾಕ್ಷಿ - ಅದು ಗೊತ್ತಿಲ್ಲ ಎಂದು ನುಡಿದಿದ್ದಾರೆ. ನಸರುಲ್ಲಾ ಮತ್ತು ನೀವು ಎಷ್ಟು ವರ್ಷದಿಂದ ಪರಿಚಯ ಎಂದರೆ ಸಾಕ್ಷಿ ಬಹಳ ವರ್ಷಗಳಿಂದ ಪರಿಚಯ ಎಂದು ನುಡಿದಿದ್ದಾರೆ. ನನ್ನ ಎದುರು ಫಾರುಕ್ ಉಲ್ಲಾನ ಬಗ್ಗೆ ನಸರುಲ್ಲಾ ಕೆಟ್ಟದಾಗಿ ಮಾತನಾಡಿದ್ದಾನಾ ಎಂದರೆ ಸಾಕ್ಷಿ - ಇಲ್ಲ ಎಂದು ನುಡಿದಿದ್ದಾರೆ. ಹಬಿದ್ ಗೆ ಮತ್ತು ನಸರುಲ್ಲಾ ರವರ ಮಧ್ಯ ಸಂಬಧ ಕೆಟ್ಟಿರಲಿಲ್ಲ ಎಂದರೆ ಗೊತ್ತಿಲ್ಲ ಎಂದು ನುಡಿದಿದ್ದಾರೆ.

ಫಾರುಕ್ ಉಲ್ಲಾ ಮತ್ತು ಹಬಿದ್ ನಡುವಿನ ಸಂಬಂಧ ಸರಿಯಾಗಿರಲಿಲ್ಲ , ಅವರು ಒಬ್ಬರಿಗೊಬ್ಬರು ನೋಡಿದರೆ ಕತ್ತಿ ಮಸಿಯುತ್ತಿದ್ದರು ಎಂದರೆ ಸಾಕ್ಷಿ - ಆ ತರಹ ಏನು ಇರಲಿಲ್ಲ ಎಂದು ನುಡಿದಿದ್ದಾರೆ. ಖಲದರ್ ಜಮೀರ್ ಮತ್ತು ಮುಜಿಬುಲ್ಲಾ ಖಾನ್ ಹಬಿದ್ ಗೆ ಸಹಾಯ ಮಾಡುತ್ತಿದ್ದರು ಎಂದರೆ ಸಾಕ್ಷಿ - ಗೊತ್ತಿಲ್ಲ ಎಂದು ನುಡಿದಿದ್ದಾರೆ.

ದಿ.17-03-2023 ರಂದು ಫಾರುಕ್ ಉಲ್ಲಾ ಕುಡಿದ ಅಮಲಿನಲ್ಲಿ ಹೊಳೆಯ ದಂಡೆ ಬಳಿ ಹೋಗಿದ್ದ ಎಂದರೆ ಸಾಕ್ಷಿ - ನಾನು ನೋಡಿಲ್ಲ ಎಂದು ನುಡಿದಿರುತ್ತಾರೆ. ಅದನ್ನು ಬಳಸಿಕೊಂಡು , ಹಬಿದ್ ರಮರ ಫಾರುಕ್ ಬಳಿ ಜಗಳ ಮಾಡಿ , ತಳ್ಳಾಡಿದ್ದರಿಂದ ಫಾರುಕ್ ಉಲ್ಲಾ ಒಡೆದ ಬಾಟಲ್ ಮೇಲೆ ಬಿದ್ದಾಗ ಆತನಿಗೆ ಕತ್ತಿನ ಬಳಿ ಗಾಯವಾಯಿತು ಎಂದರೆ ಸಾಕ್ಷಿ - ನಾನು ಅದನ್ನುನೋಡಿಲ್ಲ ಎಂದು ನುಡಿದಿರುತ್ತಾರೆ. ಅಮಲಿನಲ್ಲಿದ್ದ ಫಾರುಕ್ ಉಲ್ಲಾ ಬಿದ್ದು ತಿರುಗಿದಾಗಿ ಆತನ ಬೆನ್ನಿಗೆ ಇನ್ನೊಂದು ಒಡೆದ ಬಾಟಲ್ ಚುಚ್ಚಿರುತ್ತದೆ ಎಂದರೆ ಸಾಕ್ಷಿ - ನಾನು ನೋಡಿಲ್ಲ ಎಂದು ನುಡಿದಿರುತ್ತಾರೆ.

ದಿ.16-03-2023 ರಂದು 2 ನೇ ಆರೋಪಿ ಮನ್ಸೂರ್ ರವರ ಬರ್ತ್ ಡೇ ಇರಲ್ಲಿ ಎನ್ನುವುದು ಸರಿಯಲ್ಲ. 2 ನೇ ಆರೋಪಿಯ ಬರ್ತಡೇ ಪಾರ್ಟಿಗೆ ಹೊಳೆ ದಂಡೆ ಮೇಲೆ ನಾವೆಲ್ಲ ಸೇರಿದ್ದೇವು ಎಂದು ಹುಟ್ಟಿಸಿಕೊಂಡು ಹೇಳಿದೇನೆ ಎನ್ನುವುದು ಸರಿಯಲ್ಲ. ಬರ್ತಡೇ ಮಾಡುವ ಸಮಯದಲ್ಲಿ ಚಾಸಾ-10 ರವರ ಮೋಬೈಲ್ ನ್ನು 1 ನೇ ಆರೋಪಿ ಹಾಡು ಕೇಳುವ ಉದ್ದೇಶದಿಂದ ಪಡೆದಿದ್ದ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು

ಸರಿಯಲ್ಲ. ಚಾಸಾ-10 ಮತ್ತು 19 ಉಳಿಸಬೇಕೆಂದು ಹಾಗೂ ಮೃತನ ಮನೆಯವರನ್ನು ಉಳಿಸಬೇಕೆಂದು ನೀವು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸಾಕ್ಷಿ - ಸರಿಯಲ್ಲ ಎಂದು ನುಡಿದಿರುತ್ತಾರೆ.

ದಿ.17-03-2023 ರಂದು ಬೆಳಗಿನ 6-00 ಗಂಟೆಗೆನ ನಿಮ್ಮ ಕೇರಿ ಹತ್ತಿರ ಚಾಸಾ-10 ಬಂದು ನಿಮ್ಮ ಮತ್ತು ನಿಮ್ಮ ತಮ್ಮ ಅಮ್ಮ ಖಲದರ್ ಬಳಿ ಬಂದು ಆರೋಪಿತರು ಫಾರುಕ್ ಉಲ್ಲಾನಿಗೆ ಚಾಕು ಹಾಕಿ ಕೊಲೆ ಮಾಡಿದ್ದಾರೆ ಎಂದು ತಿಳಿಸಿದ ಎಂದು ನಾನು ಹೇಳಿದ ವಿಷಯವನ್ನು ನಾನು ಸೃಷ್ಟಿಸಿ ಹೇಳುತ್ತಿದೇನೆ ಎನ್ನುವುದು ಸರಿಯಲ್ಲ.

ಯಾವುದೇ ಕಾರಣಕ್ಕಾಗಿ ಚಾಕುಗಳನ್ನು ನಾವು ಸೇರಿದ ಸ್ಥಳಕ್ಕೆ ತಂದಿದ್ದರಾ ಎಂದರೆ ಸಾಕ್ಷಿ ನಾನು ನೋಡಿಲ್ಲ ಎಂದು ನುಡಿದಿದ್ದಾರೆ.

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.94/2023

PW- 02

CW- 09

ಪ್ರ. ಬೋ. ದಿನಾಂಕಃ 14-12-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಆಬೀದ್ ವುಲ್ಲಾ |
| ತಂದೆ/ಗಂಡನ ಹೆಸರು | : | ಹಬೀಬ್ ವುಲ್ಲಾ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ | : | ಹೊನ್ನಾಳಿ |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಚಾಸಾ.1 ನನಗೆ ಗೊತ್ತು. ಚಾ.ಸಾ-10 ರಿಂದ 13 ಮತ್ತು ಮೃತ ಫಾರುಕ್ 7 ಲ್ಲಾ ನನಗೆ ಗೊತ್ತು. ಈ ಪ್ರಕರಣದ ಆರೋಪಿತರಾದ ನಸ್ರುಲ್ಲಾ ಮತ್ತು ಮನ್ಸೂರ್ ನನಗೆ ಗೊತ್ತು. ಅವರು ನಮ್ಮ ಕೇರಿಯ ಹುಡುಗರಾಗಿರುತ್ತಾರೆ. ನಾನು ಹಣ್ಣು ಮತ್ತು ತೆಂಗಿನಕಾಯಿ ವ್ಯಾಪಾರ ಮಾಡಿಕೊಂಡಿದ್ದೇನೆ. ಮೃತ ಫಾರುಕ್ ವುಲ್ಲಾ ಸಹ ಹಣ್ಣಿನ ವ್ಯಾಪಾರ ಮಾಡಿಕೊಂಡಿದ್ದ. ಫಾರುಕ್ ವುಲ್ಲಾ ಕೊಲೆಯಾಗಿ ಮೃತನಾಗಿರುತ್ತಾನೆ.

ದಿ.16-03-2023 ರಂದು ರಾತ್ರಿ 11-30 ಗಂಟೆ ಸುಮಾರಿಗೆ ನಾನು ಮತ್ತು ಮೃತ ಫಾರುಕ್ ವುಲ್ಲಾ ಹೊನ್ನಾಳಿಯ ಬಿಎಸ್ ಎನ್ ಎಲ್ ಕಛೇರಿ ಬಳಿ ಮಾತನಾಡುತ್ತ ಕುಳಿತಿದ್ದೇವು. ಅಲ್ಲಿಗೆ ಮುಜಿಬುಲ್ಲಾ ಖಾನ್ ಮತ್ತು ಆತನ ಮಗ ಖಲಂದರ್ ಬಂದರು. ಮುಜಿಬ್‌ವುಲ್ಲಾ ಖಾನ್ ಆರೋಪಿ ಮನ್ಸೂರ್ ನ ಬರ್ತ್ ಡೆ ಕಾರ್ಯಕ್ರಮಕ್ಕೆ ಹೋಗಿದ್ದ ಆತನ ಮೋಬೈಲನ್ನು ಸಾಂಗ್ ಕೇಳಲು ಪಡೆದು, ಬೆಳಿಗ್ಗೆ ಕೊಡುತ್ತೇವೆ ಹೋಗು ಎಂದು ಜೋರ್ ಮಾಡಿ ಆತನಿಗೆ ಕಳುಹಿಸಿದರು, ನಾನು ನನ್ನ ಮಗ ಮನೆಗೆ ಬಾರದೇ ಇದ್ದದ್ದರಿಂದ ಆತನ ಮೊಬೈಲ್ ಗೆ ಕರೆ ಮಾಡಿದೆ, ಆರೋಪಿ ನಸ್ರೂಲ್ಲಾ ರಿಸಿವ್ ಮಾಡಿ , ನಿನ್ನ ಮಗ ಎಲ್ಲೋ ಹೋಗಿದ್ದಾನೆ ಎಂದು ಹೇಳಿದ ನಾನು ಸುಮ್ಮನಾದೆ , ನನ್ನ ಮಗ ಸ್ವಲ್ಪ ಹೊತ್ತಿನ ನಂತರ ಮನೆಗೆ ಬಂದು ನನಗೆ ನಡೆದ ವಿಚಾರವನ್ನು ತಿಳಿಸಿದ, ನಂತರ 1 ನೇ ಆರೋಪಿ

ನನಗೆ ನನ್ನ ಮೋಬೈಲ್ ನಿಂದ ಕರೆ ಮಾಡಿದ, ಆಗ ನಾನು ನನ್ನ ಮಗನ ಮೋಬೈಲ್ ವಾಪಸ್ ಕೊಡಪ್ಪ ಎಂದು ಕೇಳಿದೆ, ಆಗ ನನಗೆ ಸೂಳೇಮನೆಗ ,ಬೋಳಿ ಮಗನೆ ಎಂದು ಬೈದ , ನಾನು ಮೋಬೈಲ್ ಕೊಡಲ್ಲ, ನಿನಗೆ ದಮ್ ಇದ್ದರೆ ಬಂದು ತೆಗೆದುಕೊಂಡು ಹೋಗು ಎಂದು ಹೇಳಿದ ಎಂದು ಹೇಳಿ ನಮ್ಮ ಮಗನ ಮೋಬೈಲ್ ತೆಗೆದುಕೊಂಡಿದ್ದಾನೆ, ಕೊಡಿಸಪ್ಪ ಎಂದು ಕೇಳಿದ. ನಂತರ ನಾನು , ಫಾರುಕ್ ವುಲ್ಲಾ ಮತ್ತು ಖಲಂದರ್ ಮೂರು ಜನ ಗೊಲ್ಲರಹಳ್ಳಿ ಪ್ರಕಾಶ್ ಎನ್ನುವವರ ಹೊಲದ ಕೆಳಭಾಗದ ಜಾಗಕ್ಕ ಖಲಂದರ್ ಕರೆದುಕೊಂಡು ಹೋದ. ನಾವು ಅಲ್ಲಿಗೆ ಹೋದಾಗ ಆರೋಪಿತರಾದ ಮನ್ಸೂರ್ ಮತ್ತು ನಸ್ರೂಲ್ಲಾ ಇದ್ದರು. ನಾವು ಆ ಸ್ಥಳಕ್ಕೆ ಹೋದಾಗ ರಾತ್ರಿ 12-30 ಗಂಟೆಯಾಗಿತ್ತು.

ನಾನು ಆರೋಪಿಗಳಿಗೆ ಖಲಂದರ್ ನ ಮೋಬೈಲ್ ತೆಗೆದುಕೊಂಡಿದ್ದೀರಾ , ಅವನ ಅಪ್ಪನಿಗೆ ಸೂಳೇಮಗನೆ , ಬೋಳಿಮಗನೆ ಅಂತಾ ಯಾಕೆ ಬೈಯುತ್ತೀರಾ ಎಂದು ಕೇಳಿದೆ. ಅದಕ್ಕೆ ಆರೋಪಿತರು ನೀವ್ಯಾರು ಕೇಳುಲು ಬೋಳಿಮಕ್ಕಳಾ ಸೂಳೇಮಕ್ಕಳಾ ಗಾಂಡು ಎಂದು ಬೈದರು , ಆಗ ಫಾರುಕ್ ವುಲ್ಲಾ ಬೈಬೇಡಿ , ಯಾಕೆ ಬೈಯುತ್ತೀರಾ, ಫೋನ್ ಕೊಡಿ ಎಂದು ಕೇಳಿದ. ಆಗ ಕೂಡಲೇ 1 ನೇ ಆರೋಪಿ ನಸ್ರೂಲ್ಲಾ ಫಾರುಕ್ ವುಲ್ಲಾನ ಮೇಲೆ ದಾಳಿ ಮಾಡಿ , ಚಾಕುವಿನಿಂದ ಎಡ ಕುತ್ತಿಗೆಗೆ ಹಾಕಿದ. ನಾನು ಬಿಡಿಸಲು ಹೋದಾಗ 2 ನೇ ಆರೋಪಿ ಮನ್ಸೂರ್ ಮುಷ್ಟಿಯಿಂದ ನನ್ನ ಬಲಗಣ್ಣಿನ ಬಳಿ ಮತ್ತು ಎದೆಗೆ ಹೊಡೆದ. ಮನ್ಸೂರ್ ಫಾರುಕ್ ನ ಬಲ ಭುಜದ ಹಿಂಭಾಗಕ್ಕೆ ಚುಚ್ಚಿದ. ಆತನಿಗೆ ರಕ್ತ ಬಂದು ಕೆಳಗೆ ಬಿದ್ದು ಮೃತಪಟ್ಟ , ನನ್ನ ಎದೆಗೆ ಮತ್ತು ಕಣ್ಣಿಗೆ ಗಾಯಗಳಾಗಿತ್ತು. ಫಾರುಕ್ ಸತ್ತಿದ್ದಕ್ಕೆ ಅವರಿಬ್ಬರೂ ಓಡಿ ಹೋದರು. ನಾನು ಕೂಡಲೇ ವಿಚಾರನ್ನು ಮೃತನ ಮನೆಗೆ ಬಂದು ಆತನ ಹೆಂಡತಿಗೆ ತಿಳಿಸಿರುತ್ತೇನೆ ಹಾಗೂ ಆತನ ಹೆಂಡತಿ ಮತ್ತು ಆತನ ಮನೆಯವರನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತೇನೆ.

ನಾನು ನನ್ನ ಸ್ನೇಹಿತನ ಜೊತೆ ಹೊನ್ನಾಳಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಹೊನ್ನಾಳಿ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರ ಮುಂದೆ ನಡೆದ ವಿಚಾರವನ್ನು ತಿಳಿಸಿರುತ್ತೇನೆ.

ನಂತರ ನಾನು ಹೊನ್ನಾಳಿ ನ್ಯಾಯಾಲಯಕ್ಕೆ ಹೋಗಿ ನಡೆದ ಘಟನೆಯ ಬಗ್ಗೆ ಹೇಳಿಕೆ ನೀಡಿರುತ್ತೇನೆ.

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಆರೋಪಿತರು ಫಾರಕ್ ವುಲ್ಲಾ ನ ಮೇಲೆ ಹಲ್ಲೆ ಮಾಡಿದ್ದನ್ನುನಾನು ಕಣ್ಣಾರೆ ನೋಡಿದ್ದೇನೆ. ಆ ದಿನ ಚಂದ್ರನ ಬೆಳಕು ಇತ್ತು. ಮೋಬೈಲ್ ಟಾರ್ಚನ್ನು ಸಹ ನಾನು ಹಾಕಿಕೊಂಡಿದ್ದೆ. ಆರೋಪಿತರು ಹಲ್ಲೆಗೆ ಉಪಯೋಗಿಸಿದ ಚಾಕು ನೋಡಿದರೆ ಗುರುತಿಸುತ್ತೇನೆ. ಶೀಲ್ ಆಗಿರುವ ಕವರ್ ನ್ನು ತೆರೆಯಲಾಯಿತು. ಸಾಕ್ಷಿ ಚಾಕುವನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ. 6 ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ.2 ರಿಂದ 7 ನೋಡಿ ಗುರುತಿಸಿರುತ್ತಾರೆ.

ಪಾಟೀಸವಾಲುಃ- ಆರೋಪಿ ಪರ ಶ್ರೀ ಎಸ್ ಎಂ ಎಲ್ ವಕೀಲರಿಂದ.

ಆರೋಪಿಪರ ವಕೀಲರು ಗೈರುಹಾಜರು. ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.94/2023

PW- 01

CW- 01

ಪ್ರ. ಬೋ. ದಿನಾಂಕಃ 14-12-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ನಸ್ರಿನ್ ಬಾನು |
| ತಂದೆ/ಗಂಡನ ಹೆಸರು | : | ಫಾರುಕ್ ವುಲ್ಲಾ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ | : | ಹೊನ್ನಾಳಿ |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಚಾಸಾ.9 ಹಬಿದುಲ್ಲಾ ನನಗೆ ಗೊತ್ತು. ಚಾ.ಸಾ-4 ರಿಂದ 8 ಮತ್ತು ಈ ಪ್ರಕರಣದ ಇತರೆ ಸಾಕ್ಷಿದಾರರು ನನಗೆ ಗೊತ್ತು . ಆರೋಪಿಗಳು ನನಗೆ ಗೊತ್ತು. ಮೃತ ಫಾರುಕ್ ವುಲ್ಲಾ ನನ್ನ ಗಂಡ. ನನಗೆ ಮೂರು ಜನ ಮಕ್ಕಳು. ಅವರೆಂದರೆ ಮಹ್ಮದ್ ಫೈಜಾನ್, ಮಹ್ಮಕ್ ಕೀಯಾನ್ ಮತ್ತು ಸಬಿಯಾನಾಜ್. ನನ್ನ ದೊಡ್ಡಮಗ ಮಹ್ಮದ್ ಫೈಜಾನ್ ಅಂಗವಿಕಲನಾಗಿದ್ದಾನೆ ಹಾಗೂ ಮಾನಸಿಕವಾಗಿ ಬೆಳವಣಿಗೆಯಾಗಿರುವುದಿಲ್ಲ.

ನಮ್ಮ ಮನೆಯಲ್ಲಿ ನಾನು, ನನ್ನ ಗಂಡ , ನನ್ನ ಮೂರು ಜನ ಮಕ್ಕಳು , ಮೃತಪಟ್ಟ ನನ್ನ ನಾದಿಯ ಮೂರು ಮಕ್ಕಳು , ನನ್ನ ಅತ್ತೆ ಜೊತೆಯಲ್ಲಿಯೇ ವಾಸ ಮಾಡುತ್ತಿದ್ದೇವು. ನಮ್ಮ ಮನೆಯವರೆಲ್ಲರ ಜವಾಬ್ದಾರಿಯನ್ನು ನನ್ನ ಗಂಡನೇ ನೋಡಿಕೊಳ್ಳುತ್ತಿದ್ದ. ನನ್ನ ಗಂಡ ಮೃತಪಟ್ಟಿರುವುದರಿಂದ ನನ್ನ ಮತ್ತು ನನ್ನ ಮಕ್ಕಳ ಜೀವನಕ್ಕೆ ಬಹಳ ಕಷ್ಟ ಆಗಿರುತ್ತದೆ.

ನನ್ನ ಗಂಡ ಹಣ್ಣಿನ ವ್ಯಾಪಾರ ಮಾಡುತ್ತಿದ್ದ. ನನ್ನ ಗಂಡನನ್ನು ಕೊಲೆ ಮಾಡಿರುತ್ತಾರೆ. ನನ್ನ ಗಂಡನನ್ನು ಆರೋಪಿತರಾದ ಮನ್ಸೂರ್ ಮತ್ತು ನಸ್ರುಲ್ಲಾ ಕೊಲೆ ಮಾಡಿರುತ್ತಾರೆ. ದಿ.17-03-2023 ರಂದು ಮಧ್ಯರಾತ್ರಿ 1-30 ಗಂಟೆ ಸಮಯದಲ್ಲಿ ಹಬಿದುಲ್ಲಾ ಎನ್ನುವವನು ನಮ್ಮ ಮನೆಯ ಬಳಿ ಬಂದು ನಿನ್ನ ಗಂಡನನ್ನು ಆರೋಪಿತರಾದ ನಸ್ರುಲ್ಲಾ ಮತ್ತು ಮನ್ಸೂರ್ ರವರು ಚಾಕುವಿನಿಂದ ಚುಚ್ಚಿ ಕೊಲೆ ಮಾಡಿದ್ದಾರೆ ಎಂದು ತಿಳಿಸಿದ. ಸದರಿ

ವಿಷಯವನ್ನು ನಾವು ತಿಳಿದು ಗಾಭರಿಗೊಂಡು , ಏನಾಯಿತು , ಹೇಗಾಯಿತು ಎಂದು ಹಬಿದುಲ್ಲಾನನ್ನು ಕೇಳಿದೆ, ಅದಕ್ಕೆ ಅವರು ದಿ.16-03-2023 ರಂದು ರಾತ್ರಿ 11-30 ಗಂಟೆ ಸುಮಾರಿಗೆ ನಾನು ನಿನ್ನ ಗಂಡ ಬಿಎಸ್ ಎನ್ ಎಲ್ ಕಛೇರಿಯ ಹಿಂದೆ ಪೊಲೀಸ್ ಕ್ವಾಟ್ರಸ್ ಹತ್ತಿರ ಮಾತನಾಡುತ್ತ ಕುತಿಳಿದ್ದಾಗ ಖಲಂದರ್ ಮತ್ತು ಆತನ ಅಪ್ಪ ಮುಜಿಬ್ ಬಂದು - ನಮ್ಮ ಬಳಿ ಬಂದು ಮುಜಿಬ್ ಖಾನನು ನನ್ನ ಮಗ ಖಲಂದರ್, 2 ನೇ ಆರೋಪಿ ಮನ್ಸೂರ್ ನ ಬರ್ತಡೆ ಪಾರ್ಟಿಗೆ ಹೊನ್ನಾಳಿಯತುಂಗಭದ್ರಾ ನದಿ ದಡಕ್ಕೆ ಹೋಗಿದ್ದು , ಆ ಸಮಯದಲ್ಲಿ 1 ನೇ ಆರೋಪಿ ನನ್ನ ಮಗನ ಮೋಬೈಲ್ ಸಾಂಗ್ಸ್ ಕೇಳಲು ಪಡೆದುಕೊಂಡಿದ್ದು, ನಂತರ ಬರ್ತಡೆ ಪಾರ್ಟಿ ಮುಗಿಸಿ ವಾಪಸ್ ಬರುವಾಗ ಮೋಬೈಲ್ ನ್ನು ವಾಪಸ್ ಕೊಟ್ಟಿಲ್ಲ , ಆ ನಂತರ ನಾನು ನನ್ನ ಮಗನ ಮೋಬೈಲ್ ಗೆ ಕರೆ ಮಾಡಿದೆ , ಆಗ ಸದರಿ ಮೋಬೈಲನ್ನು 1 ನೇ ಆರೋಪಿ ಸ್ವೀಕರಿಸಿ ಮಾತನಾಡಿದ್ದು, ನಾನು ನನ್ನ ಮಗನ ಬಗ್ಗೆ ಕೇಳಿದಾಗ ಎಲ್ಲೊ ಹೋರಗಡೆ ಹೋಗಿದ್ದಾನೆ ಎಂದು ಹೇಳಿದ, ಆ ನಂತರ ನನ್ನ ಮಗ ಮನೆಗೆ ಬಂದು , ಅಲ್ಲಿ ನಡೆದ ವಿಚಾರವನ್ನು ತಿಳಿಸಿದ, ಆ ನಂತರ 1 ನೇ ಆರೋಪಿ ನನಗೆ ಕರೆ ಮಾಡಿದ ಆಗ ನಾನು ಆತನಿಗೆ ನನ್ನ ಮಗನ ಫೋನ್ ವಾಪಸ್ ಕೂಡಿ , ಯಾಕೆ ಆತನಿಗೆ ಸತಾಯಿಸುತ್ತಿಯಾ ಎಂದು ಕೇಳಿದೆ , ಆಗ ಅವನು ಸೂಳೇಮಗ, ಬೋಳಿ ಮಗ , ನೀನು ಯಾರು ಕೇಳಲು , ದಮ್ಮ ಇದ್ದರೆ ಬನ್ನಿ ಎಂದು ಹೇಳಿದ , ಅದಕ್ಕೆ ನಾವು ಹೋಗುತ್ತಿದ್ದೇವೆ, ನೀವಿಬ್ಬರು ಹೋಗಿ ವಿಚಾರಿಸಿ ನನ್ನ ಮಗನ ಫೋನ್ ಕೊಡಿ ಎಂದು ಹೇಳಿದ, ಆ ನಂತರ ನಾನು, ನಿನ್ನ ಗಂಡ ಮತ್ತು ಖಲಂದರ್ ಮೂರು ಜನ ಆ ಸ್ಥಳಕ್ಕೆ ಹೋದೆವು ,ಆಗ ರಾತ್ರಿ 12-30 ಗಂಟೆಯಾಗಿತ್ತು, ನಾನು 1 ನೇ ಆರೋಪಿಗೆ ಖಲಂದರ್ ನ ಫೋನ್ ಕೊಡಪ್ಪ ಎಂದು ಕೇಳಿದೆ , ಅದಕ್ಕೆ 1 ನೇ ಆರೋಪಿ ಹಬಿದುಲ್ಲಾನಿಗೆ- ಸೂಳೇಮಗನೆ , ಬೋಳಿಮಗನೆ, ನಾನು ಫೋನ್ ಕೊಡುವುದಿಲ್ಲ ಎಂದು ಹೇಳಿದ , ಆಗ ನಿನ್ನ ಗಂಡ ಯಾಕೆ ಬೈಯುತ್ತಿಯಾ ಎಂದು ಕೇಳಿದ್ದಕ್ಕೆ - 1 ನೇ ಆರೋಪಿ ನೀನು ಈ ಫೋನ್ ಕೇಳಲು ಯಾವುದೇ ಸಂಬಂಧ ಇಲ್ಲ ಎಂದು ನಿನ್ನ ಗಂಡನ ಜೊತೆ ಜಗಳ ಮಾಡಿ, ನಿನ್ನ ಗಂಡನ ಎಡ ಕುತ್ತಿಗೆಗೆ ಚಾಕು ಹಾಕಿದ, ಅದನ್ನು ನಾನು ತಡೆಯಲು ಹೋದೆ, ಆಗ 2 ನೇ ಆರೋಪಿ ಮನ್ಸೂರ್ ಕೈ ಮುಷ್ಟಿಯಿಂದ ನನ್ನ ಎದೆಗೆ ಮತ್ತು ಹಣೆಗೆ ಗುದ್ದಿದ, ಮತ್ತು ತನ್ನ ಬಳಿ ಇದ್ದ ಚಾಕುವಿನಿಂದ ನಿನ್ನ ಗಂಡನ ಬಲ ಭುಜದ ಹಿಂಭಾಗಕ್ಕೆ ಚುಚ್ಚಿ ಗಾಯಪಡಿಸಿದ, ನಿನ್ನ ಗಂಡನಿಗೆ ರಕ್ತದ ಗಾಯವಾಗಿ, ನೆಲಕ್ಕೆ ಬಿದ್ದು, ಅಲ್ಲೇ ಮೃತಪಟ್ಟ , ಅದನ್ನು ನೋಡಿ ಅವರಿಬ್ಬರೂ ಓಡಿ ಹೋದರು ಎಂದು ತಿಳಿಸಿದ.

ಕೂಡಲೇ ನಾನು ಮತ್ತು ನಮ್ಮ ಕುಟುಂಬದವರೆಲ್ಲ ನನ್ನ ಗಂಡನ ಕೊಲೆಯಾದ ಸ್ಥಳಕ್ಕೆ ಹೋಗಿ ಹೆಣವನ್ನು ನೋಡಿದ್ದೇವೆ. ಅವರು ರಕ್ತದ ಮಡುವಿನಲ್ಲಿ ಬಿದ್ದು, ಮೃತಪಟ್ಟಿದ್ದರು.

ನನ್ನ ಗಂಡನ ಹೆಣವನ್ನು ನೋಡಿದಾಗ ಎಡಕುತ್ತಿಗೆಗೆ , ಬಲ ಭುಜದ ಹಿಂಭಾಗಕ್ಕೆ ಚಾಕುವಿನಿಂದ ಚುಚ್ಚಿದ ಗಾಯಗಳಾಗಿದ್ದವು.

ನನ್ನ ಗಂಡನ ಕೊಲೆಯಾದ ಬಗ್ಗೆ ನಾನು ಪೊಲೀಸರಿಗೆ ದೂರು ನೀಡಿದ್ದು , ಸದರಿ ದೂರನ್ನು ನೋಡುತ್ತಿದ್ದು , ಅದನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

ನಂತರ ನನ್ನ ಗಂಡನ ಶವವನ್ನು ದಾವಣಗೆರೆ ಸಿಜಿ ಆಸ್ಪತ್ರೆಗೆ ತೆಗೆದುಕೊಂಡು ಬಂದು ಶವ ಪಂಚನಾಮೆ ಮಾಡಿದ್ದಾರೆ. ನಮ್ಮ ಸಂಬಂಧಿಕರು ಸಹ ಆ ಸಮಯದಲ್ಲಿ ಹಾಜರಿದ್ದರು , ಅವರ ಹೇಳಿಕೆಗಳನ್ನು ಸಹ ಪಡೆದಿದ್ದಾರೆ. ಶವ ಪಂಚನಾಮೆ ಕಾಕ್ಕೆ ಪೊಲೀಸರು ಫೋಟೋ ತೆಗೆಸಿರುತ್ತಾರೆ.

ಸಾಕ್ಷಿ ಶವ ಪಂಚನಾಮೆ ಸಮಯದಲ್ಲಿ ತೆಗೆದಿದ್ದ ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ.2 ರಿಂದ 7 ಎಂದು ಗುರುತಿಸಲಾಯಿತು.

ಶವ ಪಂಚನಾಮೆ ಕಾಲಕ್ಕೆ ಆರೋಪಿತರು ನನ್ನ ಗಡನಿಗೆ ಚಾಕು ಹಾಕಿ ಕೊಲೆ ಮಾಡಿದ್ದಾರೆ ಎಂದು ಅಭಿಪ್ರಾಯ ಪಟ್ಟಿರುತ್ತಾರೆ.

ನಾನುದೂರು ನೀಡಿದ ನಂತರ ದಿ.18-03-2021 ರಂದು ಪೊಲೀಸರು ನನ್ನನ್ನು ನನ್ನ ಗಂಡನ ಕೊಲೆಯಾದ ಸ್ಥಳಕ್ಕೆ ಕರೆದುಕೊಂಡು ಹೋಗಿ ಸಾಕ್ಷಿ ಜ್ಞಾನಮೂರ್ತಿ ಮತ್ತು ಪರಶುರಾಮಪ್ಪ ರವರ ಸಮಕ್ಷಮ ನಾನು ತೋರಿಸಿದ ಸ್ಥಳ ಪರಿಶೀಲನೆ ಮಾಡಿ ಮಧ್ಯಾಹ್ನ 2-30 ರಿಂದ 3-30 ಗಂಟೆ ವರೆಗೆ ಮಹಜರ್ ಕ್ರಮ ಜರುಗಿಸಿ, ಸ್ಥಳದಲ್ಲಿದ್ದ ರಕ್ತಸಿಕ್ಕ ಮಣ್ಣು, ಸ್ವಾಭಾವಿಕ ಮಣ್ಣು, ಒಂದು ಚಪ್ಪಲಿ, ಬರ್ತಡೆ ಪೇಪರ್ ಮತ್ತು ಕ್ಯಾಂಡಲ್ (ಕಪ್ಪು ಕೊಳವೆ) ಜಪ್ತಿ ಮಾಡಿ , ನನ್ನ ಮತ್ತು ಪಂಚರ ಸಹಿ ಪಡೆದು , ಫೋಟೋ ತೆಗೆಸಿ, ಕಚ್ಚಾ ನಕ್ಷೆ ತಯಾರಿಸಿರುತ್ತಾರೆ.

ಸಾಕ್ಷಿ ಮಹಜರ್ ನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು , ಮಹಜರನ್ನು ನಿಪಿ.8 ಎಂದು , ಸಾಕ್ಷಿಯ ಸಹಿಯನ್ನು ನಿಪಿ.8(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಕಚ್ಚಾ ನಕಾಶೆಯಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು , ಕಚ್ಚಾ ನಕಾಶೆಯನ್ನು ನಿಪಿ.9 ಎಂದು,

ಸಾಕ್ಷಿಯ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಸಮಯದಲ್ಲಿ ತೆಗೆದ ಎರಡು ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದು , ಅವುಗಳ್ನು ನಿಪಿ.10 ಮತ್ತು 11 ಎಂದು ಗುರುತಿಸಲಾಯಿತು.

ಆ ದಿನ ಪೊಲೀಸರು ವಶಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಶೀಲ್ ಆಗಿರುವ ಕವರ್ ನಿಂದ ವಸ್ತುಗಳನ್ನು ತೆಗೆದು ಸಾಕ್ಷಿಗೆ ತೋರಿಸಲಾಯಿತು. ಸಾಕ್ಷಿ ಗುರುತಿಸಿದ ರಕ್ತ ಮಿಶ್ರಿತ ಮಣ್ಣು, ಸ್ವಾಭಾವಿಕ ಮಣ್ಣು, ಒಂದು ಜೊತೆ ಚಪ್ಪಲಿ, ಬರ್ತ್ ಡೆ ಪೇಪರ್ ಮತ್ತು ಕ್ಯಾಂಡಲ್ (ಕಪ್ಪು ಕೊಳವೆ)ಗಳನ್ನು ಕ್ರಮವಾಗಿ ಮುಮಾ.1 ರಿಂದ 5 ಎಂದು ಗುರುತಿಸಲಾಯಿತು.

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀಸವಾಲು:- ಆರೋಪಿ ಪರ ಶ್ರೀ ಎಸ್ ಎಂ ಎಲ್ ವಕೀಲರಿಂದ.

ಆರೋಪಿಪರ ವಕೀಲರು ಗೈರುಹಾಜರು. ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.